# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ಸೆಪ್ಟಂಬರ್ 13, 2024

ಸಂಪುಟ : 51 ಸಂಚಿಕೆ : 121 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


# ನಾಗಮಂಗಲ ಗಲಭೆ

## ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ : ವಿಪಕ್ಷಗಳ ಕಿಡಿ

ಬೆಂಗಳೂರು, ಸೆ. 12 - ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ನಡೆದ ಎರಡು ಸಮುದಾಯಗಳ ನಡುವಿನ ಸಂಘರ್ಷದ ಬಗ್ಗೆ ಸರ್ಕಾರದ ವಿರುದ್ಧ ವಿಪಕ್ಷಗಳು ಕಿಡಿ ಕಾರಿವೆ.

ಘಟನೆ ಬಗ್ಗೆ ಎನ್‌ಡಿಎ ಮೈತ್ರಿಕೂಟ ಪಕ್ಷಗಳು ತೀವ್ರ ಕಳವಳ ವ್ಯಕ್ತಪಡಿಸಿ, ಸರ್ಕಾರ ಎಲ್ಲಿಯವರೆಗೆ ಮತ ಬ್ಯಾಂಕ್ ಓಲೈಕೆ ಮಾಡುತ್ತದೋ ಅಲ್ಲಿಯವರೆಗೂ ಇಂತಹ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿವೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಇಂತಹ ಕೋಮು ಸಂಘರ್ಷ ನಡೆದಿರುವುದು ಸರ್ಕಾರಕ್ಕೆ ಮುಜುಗರ ತಂದಿದೆ.



**ಘಟನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಈಗಾಗಲೇ 50ಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದು, ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ ಕ್ರಮ ಕೈಗೊಳ್ಳಲಾಗುವುದು.**

ಘಟನೆ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಕಿಡಿಕಾರಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ನಡೆದಿರುವ ಕಲ್ಲು ತೂರಾಟವು ಸಮಾಜದ ಶಾಂತಿಗೆ ಧಕ್ಕೆ ತರಲು ಕಿಡಿಗೇಡಿಗಳು ನಡೆಸಿರುವ ದುಷ್ಕೃತ್ಯ ಎಂಬುದು ನಿಸ್ಸಂಶಯ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದಿದ್ದಾರೆ. ಘಟನೆ ಸಂಬಂಧ ಈಗಾಗಲೇ 50ಕ್ಕೂ ಅಧಿಕ ಜನರನ್ನು ಬಂಧಿಸಲಾಗಿದೆ. ಕಳೆದ ಒಂದೂವರೆ ವರ್ಷಗಳಿಂದ ಯಾವುದೇ ಗಲಭೆ, ಗಲಾಟೆ, ಹಿಂಸಾಚಾರಗಳು ನಡೆಯದೇ ಸರ್ವಜನಾಂಗದ ಶಾಂತಿಯ ತೋಟದಂತಿದ್ದ ನಾಡನ್ನು, ಧಾರ್ಮಿಕ ನೆಲೆಗಟ್ಟಿನಲ್ಲಿ ವಿಭಜಿಸಲು ಯತ್ನಿಸುವ ದುರುಳರು ಯಾವುದೇ ಜಾತಿ, ಧರ್ಮದವರಾಗಿರಲಿ ಅಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ಈ ಹೇಳಿಕೆ ನೀಡಿದ ತಕ್ಷಣವೇ ಗೃಹ ಸಚಿವ ಜಿ.ಪರಮೇಶ್ವರ್ ಹಾಗೂ ಮಂಡ್ಯ ಜಿಲ್ಲೆ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರನ್ನು ಸಂಪರ್ಕಿಸಿ ಘಟನೆ ಬಗ್ಗೆ ಮಾಹಿತಿ ಪಡೆದಿದ್ದಲ್ಲದೆ, **(2ನೇ ಪುಟಕ್ಕೆ)**

## ಮುಡಾ ಪ್ರಕರಣ : ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು, ಸೆ. 12 - ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ವಿವಾದ ರಾಜ್ಯ ಹೈಕೋರ್ಟ್ ಅಂಗಳದಲ್ಲಿದ್ದು, ತೀರ್ಪು ಏನಾಗಬಹುದೆಂದು ತೀವ್ರ ಕುತೂಹಲ ಮೂಡಿದೆ.

ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠದ ಮುಂದೆ ಎರಡೂ ಕಡೆಯ ಕಕ್ಷಿದಾರರ ಪರ ವಕೀಲರುಗಳು ಸತತವಾಗಿ ಹಲವು ಗಂಟೆಗಳ ಕಾಲ ವಾದ ಮಂಡಿಸಿದರು. ಇಂದು ವಕೀಲರುಗಳ ಸುದೀರ್ಘ ವಾದ ಆಲಿಸಿದ ನಂತರ ತೀರ್ಪು ಕಾಯ್ದಿರಿಸಲಾಯಿತು. ಅಂತಿಮ ತೀರ್ಪು ಬರುವವರೆಗೂ ಮಧ್ಯಂತರ ಆದೇಶ ಮುಂದುವರೆಸುವಂತೆ ಹೈಕೋರ್ಟ್‌ನ **(2ನೇ ಪುಟಕ್ಕೆ)**

## ಮುಷ್ಕರ : ರಾಜೀನಾಮೆಗೆ ಸಿದ್ಧ ಎಂದ ಮಮತಾ

**ಮಾತುಕತೆಗೆ ಬರದೇ ವೈದ್ಯರು : ಸಿಎಂ ವಿಷಾದ**

ಕೊಲ್ಕತಾ, ಸೆ. 12 - ಮುಷ್ಕರ ಸ್ಥಗಿತಗೊಳಿಸುವ ಕುರಿತು ಕಿರಿಯ ವೈದ್ಯರು ಮಾತುಕತೆಗೆ ಬರದೇ ಇರುವುದಕ್ಕೆ ವಿಷಾದ ವ್ಯಕ್ತಪಡಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಜನರ ಹಿತಕ್ಕಾಗಿ ರಾಜೀನಾಮೆ ನೀಡಲು ಸಿದ್ಧ ಎಂದಿದ್ದಾರೆ.

ಆರ್.ಜಿ. ಕರ್ ಆಸ್ಪತ್ರೆಯಲ್ಲಿ ವೈದ್ಯ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣದ ನಂತರ ಕಿರಿಯ ವೈದ್ಯರು ಮುಷ್ಕರ ನಡೆಸುತ್ತಿದ್ದಾರೆ. ಮುಷ್ಕರ ನಿರತ ವೈದ್ಯರ ಜೊತೆ ಮಾತುಕತೆ **(5ನೇ ಪುಟಕ್ಕೆ)**






## ರಸ್ತೆ ವಿಸ್ತರಣೆ ಮಾರ್ಕಿಂಗ್‌ನಲ್ಲಿ ರಿಯಾಯಿತಿಗೆ ಬಿಜೆಪಿ ಒತ್ತಾಯ

**ವರ್ತಕರ ಸಂಘ, ಸಾರ್ವಜನಿಕರ ಸಮಾಲೋಚನಾ ಸಭೆಯಲ್ಲಿ ಮಾಜಿ ಶಾಸಕ ಎಚ್.ಪಿ. ರಾಜೇಶ್**

ಜಗಳೂರು, ಸೆ.12- ಪಟ್ಟಣದ ಮುಖ್ಯ ರಸ್ತೆ ವಿಸ್ತರಣೆಯಿಂದಾಗುವ ಅನುಕೂಲ, ಅನಾನುಕೂಲವನ್ನು ಹಾಲಿ ಶಾಸಕರೊಂದಿಗೆ ಚರ್ಚಿಸಿ ಮಾರ್ಕಿಂಗ್‌ನಲ್ಲಿ ರಿಯಾಯಿತಿ ಮತ್ತು ಪರಿಹಾರ ನೀಡಲು ಬಿಜೆಪಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗುವುದು ಎಂದು ಮಾಜಿ ಶಾಸಕ ಎಚ್.ಪಿ. ರಾಜೇಶ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಿಜೆಪಿ ವತಿಯಿಂದ ರಸ್ತೆ ವಿಸ್ತರಣೆ ಕುರಿತು ಕರೆದಿದ್ದ ವರ್ತಕರ ಸಂಘ ಹಾಗೂ ಸಾರ್ವಜನಿಕರ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

2008ರಲ್ಲಿ ಮಲ್ಪೆ-ಮೊಳಕಾಲ್ಮೂರು ರಾಜ್ಯ ಹೆದ್ದಾರಿಯಾಗಿ ಮಾರ್ಪಟ್ಟಿತು. ನನ್ನ ಆಡಳಿತಾವಧಿಯಲ್ಲಿಯೂ ಸಾರ್ವಜನಿಕರ ವಿಶ್ವಾಸಗಳಿಸಿ ರಸ್ತೆ ಬದಿ ಫುಟ್ ಪಾತ್ ನಿರ್ಮಾಣ ಹಾಗೂ **(2ನೇ ಪುಟಕ್ಕೆ)**

## ಸೆ.28ಕ್ಕೆ ನಿಗದಿಯಾಗಿದ್ದ ಪಿಎಸ್‌ಐ ನೇಮಕಾತಿ ಪರೀಕ್ಷೆ ಮತ್ತೆ ಮುಂದಕ್ಕೆ

ಬೆಂಗಳೂರು, ಸೆ. 12 - ಸೆಪ್ಟೆಂಬರ್ 28ಕ್ಕೆ ನಿಗದಿಯಾಗಿದ್ದ 402 ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗಳ ಲಿಖಿತ ಪರೀಕ್ಷೆಯನ್ನು ಮತ್ತೆ ಮುಂದೂಡಲಾಗಿದೆ. ಪಿಎಸ್‌ಐ ಪರೀಕ್ಷೆ ಬರೆಯಲಿರುವ ಹಲವು ಅಭ್ಯರ್ಥಿಗಳು ಇತರೆ ಸರ್ಕಾರಿ ಹುದ್ದೆಗಳ ಪರೀಕ್ಷೆಗಳನ್ನು ತೆಗೆದುಕೊಂಡಿದ್ದು, ಅವರಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ಈ **(5ನೇ ಪುಟಕ್ಕೆ)**

## ನಕಲಿ ವೈದ್ಯರ ತಡೆಗೆ ಅಭಿಯಾನ



ದಾವಣಗೆರೆ, ಸೆ. 12 - ನಕಲಿ ವೈದ್ಯರ ಹಾವಳಿ ತಡೆಯಲು ಅಭಿಯಾನ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಕಲಿ ವೈದ್ಯರಿಂದ ಚಿಕಿತ್ಸೆ ಪಡೆಯುವುದು ಅಪಾಯಕಾರಿ. ಇದರಿಂದ ಅಂಗವೈಕಲ್ಯ ಹಾಗೂ ಮಾರಣಾಂತಿಕ ಸಮಸ್ಯೆಗಳೂ ಬರಬಹುದು ಎಂದರು.

ಇತ್ತೀಚೆಗಷ್ಟೇ ಇಬ್ಬರು ನಕಲಿ ವೈದ್ಯರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಮೂಲಕ ನಕಲಿ ವೈದ್ಯರ ವಿರುದ್ಧ **(2ನೇ ಪುಟಕ್ಕೆ)**

## ಎಸ್. ಸುರೇಶ್ ನಿಧನ



ದಾವಣಗೆರೆ ಶ್ರೀನಿವಾಸ್ ನಗರ, 6ನೇ ಕ್ರಾಸ್ ವಾಸಿ

**ಎಸ್. ಸುರೇಶ್**

ಇವರು ದಿನಾಂಕ 12.09.2024 ಗುರುವಾರ ಮಧ್ಯಾಹ್ನ 2.25ಕ್ಕೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 56 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ, ಸ್ನೇಹಿತರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಪಾರ್ಥೀವ ಶರೀರವನ್ನು ದಾವಣಗೆರೆ ಶ್ರೀನಿವಾಸ ನಗರದ ಮೃತರ ನಿವಾಸದಲ್ಲಿ ದಿನಾಂಕ 13.9.2024ರ ಶುಕ್ರವಾರ ಬೆಳಿಗ್ಗೆ 12.30ರವರೆಗೆ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಹಿರಿಯೂರಿನಲ್ಲಿ ಅಂತ್ಯಕ್ರಿಯೆ ನೆರವರಿಸಲಾಗುವುದು.

**ದುಃಖತಪ್ತ ಕುಟುಂಬ : ಪತ್ನಿ : ಕುಮುದ್ವತಿ ಸುರೇಶ್, ಪುತ್ರಿ : ಡಾ. ಅನುಷಾ ಸುರೇಶ್ ಮತ್ತು ಸ್ನೇಹಿತರು, ಹಾಗೂ ಬಂಧು ಮಿತ್ರರು, ಮೊ : 99451 09381, 98868 52522**

## ದಾವಣಗೆರೆಯ ಹಿರಿಯ ಖ್ಯಾತ ವಕೀಲರಾದ ಅನಂತರಾಮ್ ಕಾರಂತ್ ನಿಧನ



ಹೊಂಡದ ಸರ್ಕಲ್, ದಾವಣಗೆರೆ ನಿವಾಸಿಗಳಾದ ಖ್ಯಾತ ಸ್ತ್ರೀ ರೋಗ ತಜ್ಞರಾದ **ಶ್ರೀಮತಿ ಸುಶೀಲಮ್ಮನವರ** ಸಹೋದರರಾದ

**ಶ್ರೀ ಅನಂತ್‌ರಾಮ್ ಕಾರಂತ್,** ಹಿರಿಯ ಖ್ಯಾತ ವಕೀಲರು

(ಜನನ : 08.04.1948 ಮರಣ : 12.09.2024)

ಇವರು ದಿನಾಂಕ : 12.9.2024ರ ಮಧ್ಯಾಹ್ನ 2.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಒಬ್ಬಪುತ್ರ, ಒಬ್ಬ ಪುತ್ರಿ ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದು, ಮೃತರ ಅಂತ್ಯಕ್ರಿಯೆಯನ್ನು (ದಿ. : 13.09.2024) ಇಂದು ಬೆಳಗ್ಗೆ 8.30ಕ್ಕೆ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನಡೆಯಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ, ಫೋ. : 98809 66412**

## ಶ್ರೀಮತಿ ಸುಮಿತ್ರಮ್ಮ ನಿಧನ



ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ವಾಸಿ ವಡ್ನಳ್ಳಿ ಚಂದ್ರಪ್ಪನವರ ಧರ್ಮಪತ್ನಿ

**ಶ್ರೀಮತಿ ಸುಮಿತ್ರಮ್ಮನವರು**

ದಿನಾಂಕ: 12-09-2024ರ ಗುರುವಾರ ಮಧ್ಯಾಹ್ನ 1-45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ , ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ:13-09-2024ರ ಶುಕ್ರವಾರದಂದು ಮಧ್ಯಾಹ್ನ 12 ಗಂಟೆಗೆ ನಾಗರಕಟ್ಟೆ ಗ್ರಾಮದ ಮೃತರ ಸ್ವಂತ ತೋಟದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**

## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ಪೂಜಾರ್ ಕರಿಬಸಪ್ಪನವರು**

ಮತ್ತು ಇವರ ಧರ್ಮಪತ್ನಿ

**ಶ್ರೀಮತಿ ಸುಮಿತ್ರಮ್ಮ ಕರಿಬಸಪ್ಪನವರು**

(ನಿಧನ : 24.09.2023)

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು... ಸದಾ ನಿಮ್ಮ ನೆನಪಿನಲ್ಲಿರುವ....

ಪೂಜಾರ್ ಶ್ರೀ ಹನುಮಂತಪ್ಪ ಮತ್ತು ಸಹೋದರರು

ಮೃತರ ಮಕ್ಕಳಾದ : ತಿಪ್ಪೇಶ್ ಪಿ., ಕಿರಣ್ ಪಿ.

ಶ್ರೀಮತಿ ಅನ್ನಪೂರ್ಣ ಶ್ರೀ ಚಂದ್ರಪ್ಪ ಪಿ., ಮಕ್ಕಳು : ಹರೀಶ್ ಪಿ.,

ಶ್ರೀಮತಿ ಜ್ಯೋತಿ ಪಿ. ಸೌಮಿತ್ರಕುಮಾರ್

ಶ್ರೀಮತಿ ಶಿಲ್ಪ ಮಂಜುನಾಥ್ ಪಿ. ಮಕ್ಕಳು : ಮಾಣಿಕ್ಯ ಎಂ., ನಂದಿನಿ ಎಂ.

ಅಳಿಯಂದಿರು, ಅಮರಾವತಿ ವಂಶಸ್ಥರು, ಶ್ಯಾಮನೂರು ಹಾಗೂ ಬಂಧು-ಮಿತ್ರರು.

ಫೋ. : 8095364113, 7676615313

**ಸೈಟುಗಳು ಮಾರಾಟಕ್ಕಿವೆ**
ಹೊಸ ಬಸ್ ಸ್ಟ್ಯಾಂಡ್ ಹಿಂಭಾಗ (ಗುರು ಬಕ್ಕೇಶ್ವರ ಲೇಔಟ್) ದಕ್ಷಿಣ 30x55 (ಅಕ್ಕ-ಪಕ್ಕ) ಮಹಾಲಕ್ಷ್ಮಿ ಲೇಔಟ್ ಪಶ್ಚಿಮ 30x50, ವಿನಾಯಕ ಬಡಾವಣೆ ಉತ್ತರ 40x60 ಶಿವ-ಪಾರ್ವತಿ ಪೂರ್ವ 40x60 (ಅಕ್ಕ-ಪಕ್ಕ) ಪಶ್ಚಿಮ 30x40
ಐಗೂರು ವಿಜಯಕುಮಾರ್
99457 02495

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
1) ಅಥಣಿ ಕಾಲೇಜ್ ಹತ್ತಿರ 40 ಅಡಿ ರೋಡಿಗಿದೆ 30x40 North
2) ನೂತನ್ ಕಾಲೇಜ್ ರೋಡಿಗೆ 25x50 South
3) ಗ್ಲಾಸ್ ಹೌಸ್ ಎದುರುಗಡೆ 30x60, 30x60 East ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ನೂತನ ಹೋಟೆಲ್‌ಗೆ ದೋಸೆ ಭಟ್ಟರು (ಪುರುಷರು)ಬೇಕಾಗಿದ್ದಾರೆ. ಜ್ಯೂಸ್ ಕೌಂಟರ್‌ಗೆ ಮಹಿಳೆಯರು ಬೇಕಾಗಿದ್ದಾರೆ. ಕೌಂಟರ್ ಒಳಗೆ ಸಪ್ಲೈ ಮಾಡಲು ಮಹಿಳೆ ಅಥವಾ ಪುರುಷ, ಹೋಟೆಲ್‌ನಲ್ಲಿ ಇತರೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
90367 34919

**ಬಂಗಲೆಗಳು ಮಾರಾಟಕ್ಕಿವೆ**
PG Ext ಉತ್ತರ 60x120, ಎಂಸಿಸಿ 'ಬಿ' ಬ್ಲಾಕ್, ಪೂರ್ವ 55x100 (ಡುಪ್ಲೆಕ್ಸ್) ವಿದ್ಯಾನಗರ ಪೂರ್ವ 40x70 (ಡುಪ್ಲೆಕ್ಸ್)
ಐಗೂರು ವಿಜಯಕುಮರ್
99457 02495

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 30x38 West 40 ಅಡಿ ರೋಡಿಗೆ Rate - 4000/- ಕರ್ನಾಟಕ ರಾಜ್ಯ ನೌಕರರ ಬಡಾವಣೆಯಲ್ಲಿ 30x40 South 40 ಅಡಿ ರೋಡಿಗೆ ಎದುರುಗಡೆ ಪಾರ್ಕ್, Rate - 3400/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ, 30x40 ಪೂರ್ವ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಕಾರ್‌ವಾಷ್, ವೀಲ್ಡ್ ಅಲೈನ್‌ಮೆಂಟ್ & ಬ್ಯಾಲೆನ್ಸಿಂಗ್ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳವಿರುತ್ತದೆ. ಸಂಪರ್ಕಿಸಿ :
ಕಾರ್ ಕೇರ್, ದಾವಣಗೆರೆ.
9538196395, 9448639815

**ಬಾಡಿಗೆಗೆ ಇದೆ**
1ನೇ ಮಹಡಿ, ಪಿಜೆ ಬಡಾವಣೆ 6ನೇ ಮುಖ್ಯರಸ್ತೆ, 6ನೇ ಕ್ರಾಸ್, #593/2 "ಬಸವಗಂಗಾ" 2 ಅಟ್ಯಾಚ್ ಬಾತ್ ರೂಂ, ಎಲ್ಲಾ ಸೌಲಭ್ಯವಿರುವ ಮನೆ ಬಾಡಿಗೆಗಿದೆ.
98441 80808

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**FOR RENT**
3 BHK HOUSE - 1st Floor
OFFICE - Ground Floor
ROOM - 2nd Floor
Shivakumarswamy Layout, Davangere.
86602 14677

**WANTED**
OM DENTAL CARE
Ram & Co Circle, Near Bank of Baroda ,Davangere.
1) Staff 2) Attender
(Full time & Part Time)
90669 93738

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಅಡುಗೆ ಭಟ್ಟರು ಬೇಕಾಗಿದ್ದಾರೆ ತಂದೂರಿ ಮತ್ತು ಚೈನೀಸ್ ಅರ್ಡರ್ ಭಟ್ಟರು ಬೇಕಾಗಿದ್ದಾರೆ**
BIET ರೋಡ್, ಹೇಮಾವತಿ ಹಾಸ್ಟೆಲ್ ಪಕ್ಕ, ಆಂಜನೇಯ ಬಡಾವಣೆ, ದಾವಣಗೆರೆ.
63615 88497, 79756 19960

**ಮನೆ ಬಾಡಿಗೆಗಿದೆ**
ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಡಬಲ್ ಬೆಡ್ ರೂಮ್ ಇರುವ ಮನೆ 1ನೇ ಮಹಡಿಯಲ್ಲಿದೆ. ಆಸಕ್ತರು ಸಂಪರ್ಕಿಸಿ : ಲಕ್ಷ್ಮಿ ಫ್ಲೋರ್ ಮಿಲ್‌ಗೆ ಹತ್ತಿರ ವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
99863 31471

Tally, Photoshop, Data Entry, Spoken English
**ಕಲಿಸಿ ನಮ್ಮಲಿಯೇ Job ಕೊಡುತ್ತೇವೆ.**
Classic Computers
97426 10385

**2BHK ಮನೆ ಮತ್ತು ರೂಮ್ ಬಾಡಿಗೆಗಿದೆ**
KSRTC Bus Stand ಹಿಂಭಾಗ ವೀಣಾ ಕ್ಲಿನಿಕ್ ರೋಡ್, 2ನೇ ಕ್ರಾಸ್, ದಾವಣಗೆರೆ.
81059 11293, 98455 59844

**13ನೇ ವರ್ಷದ ವಾರ್ಷಿಕ ಮಹೋತ್ಸವ**
ದಿನಾಂಕ 14.09.2024 ರಿಂದ 16.09.2024
**ದಾನೇಶ್ ಅಕ್ವೇರಿಯಂ**
3 ದಿನಗಳ ಕಾಲ 50% ಭಾರೀ ರಿಯಾಯಿತಿ ಮಾರಾಟ
ಅಲಂಕಾರಿಕ ಮೀನುಗಳು ಹಾಗೂ ಗೃಹಾಲಂಕಾರಿಕ ವಸ್ತುಗಳ ಪ್ರದರ್ಶನ ಮತ್ತು ಮಾರಾಟ.. ಮರೆಯಬೇಡಿ ಮರೆತು ನಿರಾಶರಾಗಬೇಡಿ..
ವಿಳಾಸ : ಕೆಟಿಜೆ ನಗರ, 8ನೇ ಕ್ರಾಸ್ ನಿಟುವಳ್ಳಿ ರಸ್ತೆ. ದಾವಣಗೆರೆ.
98453 70694

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಡ್ರೈವರ್ ಬೇಕಾಗಿದ್ದಾರೆ**
ಮಾಸಿಕ ವೇತನದ ಆಧಾರದ ಮೇಲೆ ಪರ್ಸನಲ್ ಕಾರ್‌ಗೆ ನುರಿತ ಚಾಲಕರು ಬೇಕಾಗಿದ್ದಾರೆ. ಲೈಸನ್ಸ್ ಹೊಂದಿರಬೇಕು. ವಯಸ್ಸು 30 ವರ್ಷದೊಳಗಿರಬೇಕು.
7975270406

**ಎರಡು ವರ್ಷದ ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿ**
ಎಂ.ಎಂ. ಹಿರೇಮಠ
ಎಸ್.ಎಸ್. ಲೇಔಟ್, ಬಿ ಬ್ಲಾಕ್, ದಾವಣಗೆರೆ.
99866 17127

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. (Only for Veg)
Vidyanagar last city bus stop, Davangere
8951938228, 8050222181

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಬೇಕಾಗಿದ್ದಾರೆ**
ಫೀಲ್ಡ್ ಸೇಲ್ಸ್ ಎಕ್ಸಿಕ್ಯೂಟಿವ್ ಪುರುಷರಿಗೆ ಮಾತ್ರ
ಒಂದು ವರ್ಷ ಕಾರ್ಯಾನುಭವ ಇರುವ ಫೀಲ್ಡ್ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಹೊಂದಿರುವ ಅಭ್ಯರ್ಥಿಗಳು ಸಂಪರ್ಕಿಸಿ.
ಕಾರ್ಯವ್ಯಾಪ್ತಿ ದಾವಣಗೆರೆ
7892229835

**WANTED**
PUC or Degree Pass or Fail
Computer Knowledge is must
EXCELLENT ELECTRONICS
# 2137/1, 4th Main, 3rd Cross, MCC 'A' Block, Davangere - 577 002.
Contact No.
98865 15100

**ಬೇಕಾಗಿದ್ದಾರೆ**
ನಮ್ಮ ಪೇಂಟ್ ಮತ್ತು ಹಾರ್ಡ್‌ವೇರ್ಸ್ ಅಂಗಡಿಯಲ್ಲಿ ಸೇಲ್ಸ್ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ.
ಆನಂದ ಹಾರ್ಡ್‌ವೇರ್ಸ್ & ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857


**ನೇತ್ರ ದಾನ ಶ್ರೇಷ್ಠ ದಾನ**

**ಬೇಕಾಗಿದ್ದಾರೆ**
PUC / Degree Tally Training ಆಗಿರುವ ಮತ್ತು SSLC/PUC ಆದ ಆಫೀಸ್ ಕೆಲಸಕ್ಕೆ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ನಂ. 106, ಸಿರಿಗೆರೆ ಹಾಸ್ಟೆಲ್, ಮಹೇಂದ್ರಕರ್ ಟೆಕ್ಸ್‌ಟೈಲ್ ಪಕ್ಕ, ಮಂಡಿಪೇಟೆ.
ಸಮಯ 11Am to 5Pm
94498 31654

**ಸೋಫ ಮೆಷ್ ಹಾಕುತ್ತೇವೆ**
ನಮ್ಮಲ್ಲಿ ಸೋಫ ಮೆಷ್ ಹಾಗೂ ಎಲ್ಲಾ ತರಹದ ಸೋಫಾ, ಕುಷನ್, ಸ್ಪಂಜ್ ಬೆಡ್ ಹಾಗೂ ವುಡ್ ಪಾಲೀಶ್ ಹಾಕಲಾಗುವುದು. ನಮ್ಮಲ್ಲಿ ಕಡಿಮೆ ಬೆಲೆಯಲ್ಲಿ ಹಳೇ ಸೋಫಾ ಸಿಗುತ್ತವೆ.
88614 38237

**ಜೀವರಾಜ್ (ಪಲ್ಲೇದ್ ರಾಜಣ್ಣ) ನಿಧನ**

ದಾವಣಗೆರೆ ಸಿಟಿ ಲೇಬರ್ ಕಾಲೋನಿ ವಾಸಿ ಜೀವರಾಜ್ (ಪಲ್ಲೇದ್ ರಾಜಣ್ಣ) (75) ಇವರು ದಿನಾಂಕ: 12.9.2024ರ ಗುರುವಾರ ಸಂಜೆ 7 ಗಂಟೆಗೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 13.9.2024ರ ಶುಕ್ರವಾರ ಮಧ್ಯಾಹ್ನ 12 ಕ್ಕೆ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ನಿವೃತ್ತ ಪೋಸ್ಟ್ ಮಾಸ್ಟರ್ ದತ್ತಾತ್ರಿ ನಿಧನ**

ದಾವಣಗೆರೆ ಸಿಟಿ, ಎಂ.ಸಿ.ಸಿ. 'ಬಿ' ಬ್ಲಾಕ್, 7ನೇ ಮೇನ್, 'ನಿರ್ಮಲ' # 2996ರ ವಾಸಿ ನಿವೃತ್ತ ಪೋಸ್ಟ್ ಮಾಸ್ಟರ್ ದತ್ತಾತ್ರಿ (88) ಅವರು ದಿನಾಂಕ 12.09.2024ರ ಗುರುವಾರ ರಾತ್ರಿ 11 ಕ್ಕೆ ನಿಧನರಾದರು. ಓರ್ವ ಪುತ್ರಿ, ಇಬ್ಬರು ಪುತ್ರರು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.09.2024ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ಮನೆ ಮಾರಾಟಕ್ಕಿದೆ**
ದಾವಣಗೆರೆ ಸರಸ್ವತಿ ನಗರದಲ್ಲಿ 30x45 ಅಳತೆಯಲ್ಲಿ ಪಶ್ಚಿಮಾಭಿಮುಖವಾಗಿ ಕಟ್ಟಿರುವ 3 BHK ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ. ದರ 1 ಕೋಟಿ 10 ಲಕ್ಷಗಳು (ನೆಗೋಷಿಯಲ್) (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
99454 92913

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**OFFICE BOY-1**
Office Assistant For Girls
Gaurav Communications Davangere.
94487 28866
88613 68296

**Commercial Space Available**
Ground floor 1050 sq ft
Cellar 700 sq ft
Second floor 1BHK for rent
#303/4, PJ extension, 2nd main road, stadium road, Davangere.
96111 74878

**LAND, DAIRY & POULTRY LEASE/RENT**
Land of 40 acres including Dairy, Poultry is available for Lease or Rent.
60 kms away from Davangere.
93806 10220

## ಮುದಹದಡಿ ಗ್ರಾಮ ಪಂಚಾಯಿತಿ

ಸಂಖ್ಯೆ:ಗ್ರಾ.ಪಂ. ಮು/ಇಟೆಂಡರ್/2024-25 ದಿನಾಂಕ: 12/09/2024

**ಇ ಪ್ರಕ್ಯೂರ್‌ಮೆಂಟ್ ಮೂಲಕ ಈ ಟೆಂಡರ್ ಪ್ರಕಟಣೆ**

ಮುದಹದಡಿ ಗ್ರಾಮ ಪಂಚಾಯಿತಿಯಲ್ಲಿ ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ 2021-22, 2022-23 ಮತ್ತು 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಹಾಗೂ 2024-25ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅಗತ್ಯ ಕಾಮಗಾರಿಗಳಿಗೆ ಒಟ್ಟು ಮೊತ್ತ 2294262.37 ರೂ.ಗಳಿಗೆ ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಾಗಿ ಅರ್ಹ ಟೆಂಡರ್‌ದಾರರು/ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್‌ಗಳನ್ನು ಈ ಕೆಳಗಿನಂತೆ ಆಹ್ವಾನಿಸಲಾಗಿದ್ದು, ಟೆಂಡರ್ ಸಂಖ್ಯೆ: (RDPR/2024-25/BD/WORK_INDENT8413) (RDPR/2024-25/BD/WORK_INDENT8414) (RDPR/2024-25/OW/WORK_INDENT858) (RDPR/2024-25/BD/WORK_INDENT8589)(RDPR/2024-25/OW/WORK_INDENT8817) (RDPR/2024-25/BD/WORK_INDENT8820) (RDPR/2024-25/IND4873) (RDPR/2024-25/OW/WORK_INDENT8273) (RDPR/2024-25/OW/WORK_INDENT8284) (RDPR/2024-25/OW/WORK_INDENT8285) (RDPR/2024-25/OW/WORK_INDENT8286) (RDPR/2024-25/OW/WORK_INDENT8287) (RDPR/2024-25/OW/WORK_INDENT8288) (RDPR/2024-25/OW/WORK_INDENT8411) (RDPR/2024-25/OW/WORK_INDENT8412) ಸದರಿ ಟೆಂಡರ್‌ಗೆ ಸಂಬಂಧಿಸಿದ ದಾಖಲೆಗಳನ್ನು ಈ ಪ್ರಕ್ಯೂರ್ ಮೆಂಟ್ ವೆಬ್ ಸೈಟ್ (www.kppp.karnataka.gov.in) ನಿಂದ ದಿನಾಂಕ: 12.09.2024 ರಿಂದ 24.09.2024ರ ಸಾಯಂಕಾಲ 5.30 ಗಂಟೆಯೊಳಗೆ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 24.09.2024ರ ಸಂಜೆ 5 ಗಂಟೆಯವರೆಗೆ ಇ ಟೆಂಡರ್‌ನ್ನು ಸಲ್ಲಿಸಬಹುದು. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮುದಹದಡಿ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.


**ಟೆಂಡರ್ ವೇಳಾಪಟ್ಟಿ**

| | | |
|---|---|---|
| 1 | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1 ಮತ್ತು ಅನುಬಂಧ-2ನ್ನು) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ &ಸಮಯ | ದಿನಾಂಕ: 12.09.2024 ರಿಂದ 24.09.2024 ರಂದು ಸಾಯಂಕಾಲ 5-30 ಗಂಟೆಯೊಳಗೆ https://kppp.karnataka.gov.in ಮೂಲಕ |
| 2 | ಇ-ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಇಂಡೀಕರಿಸಲು ಕೊನೆಯ ದಿನಾಂಕ | ದಿನಾಂಕ: 24.09.2024 ಸಂಜೆ 5.30 ಗಂಟೆಗೆ |
| 3 | ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ/ ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ : 26.09.2024 ಬೆಳಿಗ್ಗೆ 11.00 ಗಂಟೆಗೆ |

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ www.kppp.karnataka.gov.in ಸಂಪರ್ಕಿಸಬಹುದಾಗಿದೆ.

ತಮ್ಮ ವಿಶ್ವಾಸಿ
**ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ**
ಗ್ರಾಮ ಪಂಚಾಯ್ತಿ, ಮುದಹದಡಿ, ದಾವಣಗೆರೆ ತಾಲ್ಲೂಕು, ಜಿಲ್ಲೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಜಿ. ತಾ. ಆಲೂರು ಗ್ರಾಮದ ವಾಸಿ
**ಶ್ರೀಮತಿ ದ್ಯಾಮಮ್ಮ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 05-09.2024ನೇ ಗುರುವಾರ ರಾತ್ರಿ 8.00ಕ್ಕೆ ನನ್ನ ಪೂಜ್ಯ ಪತಿಯವರಾದ
**ಹನಗವಾಡಿ ಹನುಮಂತಪ್ಪ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 13.09.2024ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಜಿ. ತಾ. ಆಲೂರು ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ದ್ಯಾಮಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಹನಗವಾಡಿ ವಂಶಸ್ಥರು ಹಾಗೂ ಬಂಧು-ಮಿತ್ರರು.


# ಯಲವಟ್ಟಿ : ನಾಳೆ ಭಕ್ತಿ ಸಮರ್ಪಣೆ ಸಮಾರಂಭ

## ಸಿರಿಗೆರೆ, ಯಲವಟ್ಟಿ ಶ್ರೀಗಳು, ಎಸ್ಸೆಸ್ಸೆಂ, ಡಾ. ಪ್ರಭಾ, ಬಿ.ಪಿ. ಹರೀಶ್ ಭಾಗಿ



ಮಲೇಬೆನ್ನೂರು, ಸೆ.12- ಸಿರಿಗೆರೆ ಬೃಹನ್ಮಠದಲ್ಲಿ ಇದೇ ದಿನಾಂಕ 24 ರಂದು ಜರುಗುವ ಲಿಂಗೈಕ್ಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿಯವರ 32ನೇ ಶ್ರದ್ಧಾಂಜಲಿ ಸಮಾರಂಭದ ದಾಸೋಹಕ್ಕೆ ಹರಿಹರ ತಾಲ್ಲೂಕಿನಿಂದ ಭಕ್ತಿ ಸಮರ್ಪಣೆ (ಅಕ್ಕಿ ಸಮರ್ಪಣೆ) ಸಮಾರಂಭವನ್ನು ಯಲವಟ್ಟಿ ಗ್ರಾಮದಲ್ಲಿ ನಾಡಿದ್ದು ದಿನಾಂಕ 14ರ ಶನಿವಾರ ಬೆಳಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಕಾರ್ಯದರ್ಶಿ ನಿಟ್ಟೂರಿನ ಇಟಗಿ ಶಿವಣ್ಣ ತಿಳಿಸಿದ್ದಾರೆ.

ಪಟ್ಟಣದ ಶಿವ ವಿವಿಧೋದ್ದೇಶ ಸಹಕಾರ ಸಂಘದ ಸಭಾಂಗಣದಲ್ಲಿ ಮೊನ್ನೆ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮತ್ತು ಯಲವಟ್ಟಿಯ ಗುರುಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಈ ಭಕ್ತಿ ಸಮರ್ಪಣೆ ಸಮಾರಂಭ ಜರುಗಲಿದೆ ಎಂದರು.

ಹರಿಹರ ತಾ. ಸಾಧು ವೀರಶೈವ ಸಮಾಜದ ಅಧ್ಯಕ್ಷ ಅಮರಾವತಿ ಮಹಾದೇವಪ್ಪ ಗೌಡ್ರು ಅಧ್ಯಕ್ಷತೆಯಲ್ಲಿ ನಡೆಯುವ ಈ ಸಮಾರಂಭದಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಬಿ.ಪಿ.ಹರೀಶ್ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಮಾರಂಭದ ನಂತರ ಪ್ರಸಾದ ವ್ಯವಸ್ಥೆ ಮಾಡಲಾಗಿದ್ದು, ಅಂದು ಬೆಳಿಗ್ಗೆ 11 ಗಂಟೆಗೆ ಸಿರಿಗೆರೆ ಶ್ರೀಗಳನ್ನು ಎಕ್ಕೆಗೊಂದಿ ಕ್ರಾಸ್‌ನಿಂದ ಯಲವಟ್ಟಿ ಗ್ರಾಮಕ್ಕೆ ಬೈಕ್ ರ್‍ಯಾಲಿ ಮೂಲಕ ಕರೆತಲಾಗುವುದೆಂದು ಗ್ರಾಮದ ಯುವಕ ಡಿ.ಜಿ. ರಾಜೇಶ್‌ಗೌಡ ತಿಳಿಸಿದರು.

ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಅಮರಾವತಿ ಮಹಾದೇವಪ್ಪ ಗೌಡ್ರು, ಸಮಾಜದ ನಿರ್ದೇಶಕ ಜಿ.ಮಂಜುನಾಥ್ ಪಟೇಲ್, ಯಲವಟ್ಟಿ ಗ್ರಾಮದ ಮುಖಂಡರಾದ ಡಿ.ಹೆಚ್.ಚನ್ನಬಸಪ್ಪ, ಡಿ.ಹೆಚ್. ಮಹೇಂದ್ರಪ್ಪ, ಕೆ. ಚನ್ನಬಸಪ್ಪ, ಗ್ರಾ.ಪಂ. ಸದಸ್ಯ ಬಿ.ಸಿದ್ದೇಶ್, ಬಿ.ವಿ.ಅನಿಲ್, ಡಿ.ಸಿ. ಕೀರ್ತಿಕುಮಾರ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ರಿಯಾಯಿತಿಗೆ ಬಿಜೆಪಿ ಒತ್ತಾಯ



(1ನೇ ಪುಟದಿಂದ) ವಾಹನಗಳ ಸುಗಮ ಸಂಚಾರಕ್ಕೆ ಅಗತ್ಯವಿರುವಷ್ಟು ರಸ್ತೆ ಅಗಲೀಕರಣಗೊಳಿಸಲಾಗಿತ್ತು ಎಂದು ಹೇಳಿದರು.

ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಜನಸಂಖ್ಯೆ ಏರಿಕೆಯಾಗುತ್ತಿದೆ. ಪ್ರಸಕ್ತ ರಸ್ತೆ ವಿಸ್ತರಣೆಗೆ ಎರಡೂ ಬದಿ 69 ಅಡಿ ಅಗಲೀಕರಣಕ್ಕೆ ಮಾರ್ಕಿಂಗ್ ಮಾಡಿರುವುದರಿಂದ ನಿವಾಸಿಗಳಿಗೆ ಹಾಗೂ ವರ್ತಕರಿಗೆ ತೊಂದರೆ ಆಗಲಿದೆ ಎಂದು ಆತಂಕ ವ್ಯಕ್ತ ಪಡಿಸಿದ್ದಾರೆ.

ಶಾಸಕ ಬಿ. ದೇವೇಂದ್ರಪ್ಪ ಅವರ ಅಭಿವೃದ್ಧಿ ಕಾಮಗಾರಿಗಳಿಗೆ ಸದಾ ಸಹಕಾರವಿದೆ. ಆದರೆ 69 ಅಡಿಗಿಂತ ಕಡಿಮೆ ಅಳತೆಯಲ್ಲಿ ರಸ್ತೆ ವಿಸ್ತರಣೆ ಮಾಡಲು ಬಿಜೆಪಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವರಿಕೆ ಮಾಡಲಾಗುವುದು ಎಂದು ತಿಳಿಸಿದರು.

ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಪಟ್ಟಣದ ಅಭಿವೃದ್ಧಿ ವಿಚಾರದಲ್ಲಿ ರಾಜಕಾರಣ ಮಾಡುವುದಿಲ್ಲ. ಆದರೆ ಕೆಲವರಿಗೆ ತೊಂದರೆ ಆಗುತ್ತಿರುವ ಕೂಗು ಕೇಳಿ ಬರುತ್ತಿದೆ. ಆದ್ದರಿಂದ ಸಲಹೆ-ಸಹಕಾರ ಪಡೆಯಲು ಸಭೆ ಕರೆಯಲಾಗಿದೆ ಎಂದರು.

ನನ್ನ ಆಡಳಿತಾವಧಿಯಲ್ಲಿ ಫುಟ್ ಪಾತ್, ದ್ವಿಮುಖ ರಸ್ತೆ ನಿರ್ಮಾಣ, ಹೈಮಾಸ್ಟ್ ದೀಪ ಅಳವಡಿಕೆ ಮಾಡಲಾಗಿದೆ. ಬೈಪಾಸ್ ರಸ್ತೆ ಶೀಘ್ರದಲ್ಲಿ ಅಸಾಧ್ಯ. ಅಲ್ಲಿಯೂ ಸಾಕಷ್ಟು ಕಾನೂನು ತೊಡಕುಗಳಿವೆ, ರಸ್ತೆ ವಿಸ್ತರಣೆಯಲ್ಲಿ ರಿಯಾಯಿತಿ ಹಾಗೂ ಸರ್ಕಾರದಿಂದ ನಿರಾಶ್ರಿತರಿಗೆ ಪರಿಹಾರಕ್ಕಾಗಿ ಒತ್ತಾಯಿಸಲಾಗುವುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವಿಸ್ತರಣೆಯಿಂದ ವ್ಯಾಪಾರಿಗಳಿಗೆ ನಷ್ಟವಾಗುತ್ತದೆ. ಪ್ರಮುಖ ವೃತ್ತಗಳಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ, ಏಕ ಮುಖ ರಸ್ತೆ ಮಾಡಬೇಕಿದೆ. ವ್ಯಾಪಾರಕ್ಕೆ ಒಂದೇ ಮಾರ್ಗ ವಿದೆ. ಬದಲಾಗಿ ಪಟ್ಟಣದ ಹೊರವಲಯದಲ್ಲಿ 100 ಅಡಿ ರಿಂಗ್ ರಸ್ತೆ, ಬೈಪಾಸ್ ರಸ್ತೆ ನಿರ್ಮಾಣವಾಗಲಿ. ಸದ್ಯಕ್ಕೆ ರಸ್ತೆ ವಿಸ್ತರಣೆಗೊಳಿಸದೆ 2-3 ವರ್ಷಗಳ ಕಾಲಾವಕಾಶ ನೀಡಿದರೆ ಸೂಕ್ತ ಎಂದು ತಿಳಿಸಿದರು.

ಸಭೆಯಲ್ಲಿ ಪ.ಪಂ ಅಧ್ಯಕ್ಷ ನವೀನ್ ಕುಮಾರ್, ಸದಸ್ಯರಾದ ಆರ್. ತಿಪ್ಪೇಸ್ವಾಮಿ, ರೇವಣಸಿದ್ದಪ್ಪ, ವರ್ತಕರ ಸಂಘದ ತಾಲ್ಲೂಕು ಅಧ್ಯಕ್ಷ ಖಲಂದರ್ ಖಾನ್, ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ. ಮಹೇಶ್, ಮುಖಂಡರಾದ ಓಬಳೇಶ್, ಬಾಬುರೆಡ್ಡಿ, ಡಿ. ನಾಗರಾಜ್ ರಾವ್, ಶಿವಕುಮಾರ್, ಅಶೋಕ್ ಸೇರಿದಂತೆ ವರ್ತಕರು, ಸಾರ್ವಜನಿಕರಿದ್ದರು.

# ನಾಗಮಂಗಲದಲ್ಲಿ ಗಲಭೆ

(1ನೇ ಪುಟದಿಂದ) ಇಂತಹ ಕೃತ್ಯಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕುವಂತೆ ಸೂಚಿಸಿದ್ದಾರೆ.

ಮುಖ್ಯಮಂತ್ರಿ ಅವರ ಆದೇಶದ ಹಿನ್ನೆಲೆಯಲ್ಲಿ ಗೃಹ ಮಂತ್ರಿ ಅವರು, ವಿಧಾನಸೌಧದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರೆ, ಉಸ್ತುವಾರಿ ಸಚಿವರು ಘಟನಾ ಸ್ಥಳಕ್ಕೆ ತೆರಳಿ ಪರಿಸ್ಥಿತಿ ಪರಿಶೀಲಿಸಿ, ಜಿಲ್ಲಾ ಪೋಲಿಸ್ ಅಧಿಕಾರಿಗಳ ಸಭೆ ನಡೆಸಿದರು. ಯಾವುದೇ ಪೂಜಾ ಸಮಾರಂಭಗಳು ಮತ್ತು ಮೆರವಣಿಗೆ ವಿಷಯದಲ್ಲಿ ಜಿಲ್ಲಾ ಪೋಲಿಸರು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳು ಸೂಚಿಸಬೇಕು ಎಂದು ಪರಮೇಶ್ವರ್ ತಿಳಿಸಿದ್ದಾರೆ.

ನಾಗಮಂಗಲದಲ್ಲಿ ಅಲ್ಪ ದಿನಗಳಲ್ಲೇ ಎರಡು ಬಾರಿ ಇಂತಹ ಸ್ಥಿತಿ ನಿರ್ಮಾಣವಾಗಿದೆ, ಯಾವುದು ಸೂಕ್ಷ್ಮ ಪ್ರದೇಶವೆಂದು ಗುರುತಿಸಿರುತ್ತೀರೋ ಅಂತಹ ಕಡೆಗಳಲ್ಲಿ ಬಹಳ ಜಾಗರೂಕತೆ ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಸಂಸದರೂ ಆಗಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ರಾಜ್ಯ ಬಿಜೆಪಿ ನಾಗಮಂಗಲ ಘಟನೆಯನ್ನು ತೀವ್ರವಾಗಿ ಖಂಡಿಸಿರುವುದಲ್ಲದೆ, ಮತ ಬ್ಯಾಂಕ್‌ಗಾಗಿ ಓಲೈಕೆ ರಾಜಕಾರಣ ಮಾಡಿದರೆ, ಇಂತಹ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಕುಮಾರಸ್ವಾಮಿ, ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ಒಂದು ಸಮುದಾಯದ ಪುಂಡರು ನಡೆಸಿದ ದಾಳಿಯನ್ನು ಉಗ್ರವಾಗಿ ಖಂಡಿಸುತ್ತೇನೆ ಎಂದಿದ್ದಾರೆ. ರಾಜ್ಯ ಬಿಜೆಪಿ ಈ ಸಂಬಂಧ ಮಾಧ್ಯಮ ಹೇಳಿಕೆ ನೀಡಿ, ಕಾಂಗ್ರೆಸ್ ಸರ್ಕಾರದಲ್ಲಿ ಮತಾಂಧಶಕ್ತಿಗಳು ಮತ್ತೊಮ್ಮೆ ಅಟ್ಟಹಾಸ ಮೆರೆದಿದ್ದು, ಸರ್ವಜನಾಂಗದ ಶಾಂತಿಯ ತೋಟವಾಗಿದ್ದ ಕರ್ನಾಟಕದಲ್ಲಿ ಜಿಹಾದಿ ಮುಳ್ಳುಗಳ ದುಸ್ಸಾಹಸ ಶಾಂತಿ ಕದಡುತ್ತಿದೆ ಎಂದಿದೆ.

### ಮುಂಜಾಗ್ರತಾ ಕ್ರಮ ಕೈಗೊಂಡಿಲ್ಲ : ಬಿಜೆಪಿ

**ಕಳೆದ ವರ್ಷವೂ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ಸಂದರ್ಭದಲ್ಲಿ ಇಂತಹುದೇ ಘಟನೆ ನಡೆದಿದ್ದರೂ, ಈ ಬಾರಿ ಪೊಲೀಸರು ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದು ಕಾಂಗ್ರೆಸ್ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಬಿಜೆಪಿ ಟೀಕಿಸಿದೆ. ರಕ್ಷಣೆ ಕೋರಿ ಪೊಲೀಸ್ ಠಾಣೆಗೆ ಬಂದವರ ಮೇಲೆಯೇ ಮತಾಂಧ ಪುಂಡರು ಹಲ್ಲೆ, ದಬ್ಬಾಳಿಕೆ ನಡೆಸುತ್ತಾರೆಂದರೆ ಇಂತಹ ಮನಸ್ಥಿತಿಗೆ ಕಾಂಗ್ರೆಸ್ ಸರ್ಕಾರದಲ್ಲಿ ಎಷ್ಟು ಪ್ರೋತ್ಸಾಹ, ಪೋಷಣೆ ದೊರಕುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಪಕ್ಷ ಹೇಳಿದೆ.**

# ಕಾಯ್ದಿರಿಸಿದ ಕೋರ್ಟ್

(1ನೇ ಪುಟದಿಂದ) ಏಕಸದಸ್ಯ ಪೀಠ ಸೂಚಿಸಿದೆ.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಸತತ ನಾಲ್ಕೈದು ಗಂಟೆಗಳ ವಾದ ಮಂಡಿಸಿದ ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಮುಡಾ ಪ್ರಾಸಿಕ್ಯೂಷನ್ ವಿಚಾರದಲ್ಲಿ ರಾಜ್ಯಪಾಲರು ರಾಜಕೀಯ ನಿರ್ಧಾರ ಕೈಗೊಂಡಿದ್ದಾರೆ ಎಂದರು.

ಮುಡಾದಲ್ಲಿ ಹಗರಣ ನಡೆದಿರುವುದರಿಂದಲೇ ಸರ್ಕಾರ ಆಯೋಗ ರಚನೆ ಮಾಡಿದೆ, ವಿಚಾರಣೆಯನ್ನು ಇಂದೇ ಮುಗಿಸಿ ಎಂದು ಮನವಿ ಮಾಡಿದರು. ಎರಡೂ ಕಡೆಯ ವಾದ ಪ್ರತಿವಾದ ಪೂರ್ಣಗೊಂಡ ಹಿನ್ನೆಲೆಯಲ್ಲಿ ತೀರ್ಪನ್ನು ಕಾಯ್ದಿರಿಸಲಾಗಿದೆ.

# ಬಾಡಾ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಶಾಂತಾ



ದಾವಣಗೆರೆ, ಸೆ. 12 - ಬಾಡಾ ಗ್ರಾಮ ಪಂಚಾಯ್ತಿ ಅಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಎಂ.ಟಿ. ಶ್ರೀನಿವಾಸ್ ಅವರ ಪತ್ನಿ ಶ್ರೀಮತಿ ಶಾಂತಾ ಶ್ರೀನಿವಾಸ್ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಸಹಕಾರ ಇಲಾಖೆಯ ಅಧಿಕಾರಿ ಮಂಜುಳಮ್ಮ ಚುನಾವಣಾಧಿಕಾರಿಯಾಗಿದ್ದರು.

# ಇಂದು ಅನ್ನ ಸಂತರ್ಪಣೆ

ವಿನೋಬನಗರದ ಶ್ರೀ ವರಸಿದ್ದಿ ವಿನಾಯಕ ಸೇವಾ ಸಮಿತಿಯಿಂದ 32ನೇ ವರ್ಷದ ಗಣೇಶೋತ್ಸವದ ಪ್ರಯುಕ್ತ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮುದಾಯ ಭವನದಲ್ಲಿ ಇಂದು ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ. ನಾಡಿದ್ದು ಭಾನುವಾರ ಮೆರವಣಿಗೆ ಮೂಲಕ ಬಾತಿ ಕೆರೆಯಲ್ಲಿ ವಿಸರ್ಜಿಸಲಾಗುವುದು.

# ನಗರದಲ್ಲಿ ಇಂದು ಉದ್ಯೋಗ ಮೇಳ


ಇಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾಡಳಿತ ಭವನದ ಕೊಠಡಿ ಸಂಖ್ಯೆ 51 ರಲ್ಲಿ ಉದ್ಯೋಗ ಮೇಳ ನಡೆಯಲಿದೆ. ಸಂಪರ್ಕಿಸಿ : 8105122556, 08192-259446

# ತಡೆಗೆ ಅಭಿಯಾನ

(1ನೇ ಪುಟದಿಂದ) ಅಭಿಯಾನ ನಡೆಸಲು ನಿರ್ಧರಿಸಲಾಗಿದೆ. ನಕಲಿ ವೈದ್ಯರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಸಾರ್ವಜನಿಕರೂ ಸಹ ನಕಲಿ ವೈದ್ಯರ ಬಗ್ಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ರಸ್ತೆ ಬದಿಯಲ್ಲಿ ಅಡಿಕೆ ಸಿಪ್ಪೆ ಹಾಕದಂತೆ ಇದೇ ಸಂದರ್ಭದಲ್ಲಿ ರೈತರಲ್ಲಿ ಮನವಿ ಮಾಡಿಕೊಂಡ ಅವರು, ಸಿಪ್ಪೆಯನ್ನು ಗೊಬ್ಬರ ಮಾಡಲು ಕೃಷಿ ಇಲಾಖೆಯ ಮೂಲಕ ಕೆಮಿಕಲ್ ಕಾಂಪೋಸ್ಟ್ ನೀಡಲಾಗುತ್ತಿದೆ. ಇದನ್ನು ಬಳಸಬೇಕು ಎಂದರು. ರಸ್ತೆ ಬದಿಯಲ್ಲಿ ಸಿಪ್ಪೆ ಸುಡುವ ಕಾರಣದಿಂದ ಕಳೆದ ವರ್ಷ ಎರಡು ಅಪಘಾತಗಳಾಗಿ ಅಮಾಯಕ ಜೀವಗಳು ಬಲಿಯಾಗಿವೆ. ಹೀಗಾಗಿ ರೈತರು ರಸ್ತೆ ಬದಿ ಸಿಪ್ಪೆ ಹಾಕಬಾರದು. ರೈತರಿಗೆ ತೊಂದರೆ ಕೊಡುವ ಉದ್ದೇಶ ನಮ್ಮದಲ್ಲ. ಆದರೆ, ಇದನ್ನು ಮೀರಿ ಸಿಪ್ಪೆ ರಸ್ತೆಗೆ ಹಾಕಿದರೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

# ನಂದಿಬೇವೂರು ಗ್ರಾ.ಪಂ ಅಧ್ಯಕ್ಷರಾಗಿ ಪಾರ್ವತಮ್ಮ



ಹರಪನಹಳ್ಳಿ, ಸೆ.12- ತಾಲ್ಲೂಕಿನ ನಂದಿಬೇವೂರು ಗ್ರಾಮ ಪಂಚಾಯ್ತಿಯ ನೂತನ ಅಧ್ಯಕ್ಷರಾಗಿ ಪಾರ್ವತಮ್ಮ ಆಯ್ಕೆಯಾಗಿದ್ದಾರೆ.

ಕೊಂಗನ ಹೊಸೂರು ರತ್ನಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ನಡೆಯಿತು. ಎಸ್ಸಿ ಮಹಿಳಾ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಂದಿ ಬೇವೂರಿನ ಪಾರ್ವತಮ್ಮ ಮತ್ತು ಸುಜಾತ ನಾಮಪತ್ರ ಸಲ್ಲಿಸಿದ್ದರು.

ಒಟ್ಟು 23 ಸದಸ್ಯರನ್ನು ಹೊಂದಿರುವ ಗ್ರಾ. ಪಂಚಾಯತಿಯಲ್ಲಿ ಪಾರ್ವತಮ್ಮ 14 ಮತಗಳನ್ನು ಪಡೆದು ಜಯಶೀಲರಾದರೆ ಪ್ರತಿ ಸ್ಪರ್ಧಿ ಸುಜಾತ 9 ಮತಗಳನ್ನು ಪಡೆದು ಪರಾಭವಗೊಂಡರು ಎಂದು ಚುನಾವಣಾಧಿಕಾರಿ ತಹಶೀಲ್ದಾರ್ ಬಿ.ವಿ. ಗಿರೀಶ್‌ಬಾಬು ತಿಳಿಸಿದರು.

ಈ ವೇಳೆ ಗ್ರಾ.ಪಂ ಮಾಜಿ ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್, ಸದಸ್ಯರಾದ ಕಲ್ಲಹಳ್ಳಿ ಬೃಂದಮ್ಮ, ನಾಗಮ್ಮ, ಆವಿನ ಸುಜಾತ, ಸಿದ್ದೇಶ, ಫಕ್ಕಿರಪ್ಪ, ವೀರಣ್ಣ, ಭರಮನಗೌಡ, ರತ್ನಮ್ಮ, ಭೀಮಣ್ಣ, ವೀರಮ್ಮ, ಪಿಡಿಒ ಎಸ್. ವೀರೇಶ್, ಗ್ರಾಮ ಆಡಳಿತಾಧಿಕಾರಿ ಸುರೇಶ್ ಮತ್ತಿತರರಿದ್ದರು.

# ಯುಬಿಡಿಟಿಯ ಶೇ.50 ಮ್ಯಾನೇಜ್‌ಮೆಂಟ್ ಕೋಟಾ ಹಿಂಪಡೆಯಲು ಎಐಡಿಎಸ್‌ಓ ಆಗ್ರಹ



ದಾವಣಗೆರೆ, ಸೆ.12-ನಗರದ ಯುಬಿಡಿಟಿ ಕಾಲೇಜಿನ ಶೇ.50 ರಷ್ಟು ಮ್ಯಾನೇಜ್ಮೆಂಟ್ ಕೋಟಾ ಹಿಂಪಡೆಯಲು ಆಗ್ರಹಿಸಿ ಎಐಡಿಎಸ್‌ಓ ಹಾಗೂ ಯುಬಿಡಿಟಿ ಉಳಿಸಿ ಹೋರಾಟ ಸಮಿತಿಯ ವಿದ್ಯಾರ್ಥಿಗಳ ನಿಯೋಗವು ಜಿಲ್ಲಾ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ್ ಮತ್ತು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಶೈಕ್ಷಣಿಕ ವರ್ಷದಿಂದ ಉನ್ನತ ಶುಲ್ಕದ ಅಡಿಯಲ್ಲಿ ಶೇ. 50 ರಷ್ಟು ಸೀಟುಗಳನ್ನು ಮಾರಲಾಗುತ್ತಿದೆ! ಸರ್ಕಾರಿ ಶುಲ್ಕ 42,866 ರೂ. ಇದ್ದು, 250 ಸೀಟುಗಳಿಗೆ ಈ ಶುಲ್ಕದಡಿ ಪ್ರವೇಶ ನೀಡಲಾಗುತ್ತಿದೆ. ಇನ್ನುಳಿದ 254 ಸೀಟುಗಳಿಗೆ 97,495 ರೂ ಶುಲ್ಕ ನಿಗದಿಪಡಿಸಲಾಗಿದೆ.

ಈ ಭಾಗದ ಲಕ್ಷಾಂತರ ಬಡ ಹಾಗೂ ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳು ಯುಬಿಡಿಟಿಯಿಂದ ಶಿಕ್ಷಣ ಪಡೆದು ದೇಶ ಹಾಗೂ ವಿದೇಶಾದ್ಯಂತ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇಂತಹ ಪ್ರತಿಷ್ಠಿತ ಸಂಸ್ಥೆಗೆ ಹೆಚ್ಚಿನ ಶುಲ್ಕಕ್ಕೆ ಸೀಟುಗಳನ್ನು ಹರಾಜಿಗೆ ಹಾಕಿದರೆ, ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಶುಲ್ಕ ಭರಿಸಲು ಸಾಧ್ಯವಾಗದೇ ಉನ್ನತ ಶಿಕ್ಷಣದಿಂದ ದೂರವಾಗುತ್ತಾರೆ ಎಂದು ತಿಳಿಸಿದರು.

ಈ ಭಾಗದ ರೈತರು ಹಾಗೂ ಕಾರ್ಮಿಕರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಈಗಿರುವ 42,866 ರೂ. ಶುಲ್ಕವೇ ಬಡ ವಿದ್ಯಾರ್ಥಿಗಳಿಗೆ ದೊಡ್ಡ ಹೊರೆಯಾಗಿರುವಾಗ ಹೆಚ್ಚಿನ ಶುಲ್ಕವು ಅವರಿಂದ ಶಿಕ್ಷಣದ ಹಕ್ಕನ್ನು ಕಸಿದುಕೊಂಡಂತೆ ಎಂದು ವಿದ್ಯಾರ್ಥಿಗಳು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು.

ಮನವಿಗೆ ಸ್ಪಂದಿಸಿದ ಸಂಸದರು ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗ ಮಾಡಲು ಮುಕ್ತ ಅವಕಾಶ ಕಲ್ಪಿಸಬೇಕೆ ಹೊರತು, ಬಾಗಿಲು ಮುಚ್ಚುವಂತಿರಬಾರದು. ಈ ವಿಷಯವನ್ನು ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರ ಬಳಿ ಚರ್ಚಿಸುವುದಾಗಿ ಭರವಸೆ ನೀಡಿದರು.

ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಮನವಿ ಸ್ವೀಕರಿಸಿ, ಈ ವಿಷಯವನ್ನು ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತರುತ್ತೇವೆ ಎಂದು ಹೇಳಿದರು.

ಉನ್ನತ ಶುಲ್ಕದ ಶೇ.50 ರಷ್ಟು ಕೋಟಾವನ್ನು ಅನ್ನು ಕೈಬಿಡಬೇಕು, ವಿದ್ಯಾರ್ಥಿಗಳಿಂದ ಪಡೆದ ಹೆಚ್ಚಿನ ಶುಲ್ಕವನ್ನು ಹಿಂದಿರುಗಿಸಬೇಕು, ಕಾಲೇಜು ಅಭಿವೃದ್ಧಿಗೆ ಸರ್ಕಾರದಿಂದ ಹೆಚ್ಚಿನ ಅನುದಾನ ಒದಗಿಸಬೇಕು, ಯುಬಿಡಿಟಿ ಕಾಲೇಜಿನ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಬೇಕು ಎಂಬಿತರೇ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಜಿಲ್ಲಾ ಅಧ್ಯಕ್ಷರಾದ ಪೂಜಾ ನಂದಿಹಳ್ಳಿ, ಯುಬಿಡಿಟಿ ಉಳಿಸಿ ಸಮಿತಿಯ ಸದಸ್ಯರಾದ ಶ್ರೀನಿವಾಸ್, ಪ್ರಜ್ವಲ್, ರಕ್ಷಿತಾ, ದರ್ಶನ್, ಚಂದನ, ದೀಪಿಕಾ, ಯಶವಂತ್, ಅಭಿಷೇಕ್ ಸಿಂಗ್, ವಿಜಯ್ ಶ್ರವಣ್, ನಾಗೇಂದ್ರ ಮತ್ತಿತರರು ನಿಯೋಗದಲ್ಲಿ ಭಾಗವಹಿಸಿದ್ದರು.

# ಒಳ ಮೀಸಲಾತಿಗೆ ಒತ್ತಾಯಿಸಿ ದಸಂಸ ತಮಟೆ ಚಳವಳಿ



ದಾವಣಗೆರೆ, ಸೆ. 12- ಪರಿಶಿಷ್ಟ ಜಾತಿಯೊಳಗಿನ ಉಪ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ತಮಟೆ ಚಳವಳಿ ನಡೆಸಿ, ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಒಳಮೀಸಲಾತಿ ಕಲ್ಪಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಇದೇ ವೇಳೆ ದಸಂಸ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ ಮಾತನಾಡಿ, ಒಳ ಮೀಸಲಾತಿ ನೀಡುವ ಅಧಿಕಾರ ಆಯಾ ರಾಜ್ಯ ಸರ್ಕಾರಗಳಿಗೆ ಇದೆ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿರುವುದು ಸ್ವಾಗತಾರ್ಹ. ಈ ತೀರ್ಪನ್ನು ರಾಜ್ಯ ಸರ್ಕಾರ ತಕ್ಷಣ ಅನುಷ್ಠಾನಗೊಳಿಸುವ ಮೂಲಕ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿದರು.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪು ಪರಿಶಿಷ್ಟ ಜಾತಿಯ, ಶೋಷಿತ ಸಮುದಾಯಗಳಲ್ಲಿ ಭರವಸೆ ಮೂಡಿಸಿದೆ. ಕಳೆದ ಮೂರು ದಶಕಗಳಿಂದಲೂ ದಲಿತ ಸಂಘರ್ಷ ಸಮಿತಿ ಕೈಗೊಂಡಿದ್ದ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ. ಮೀಸಲಾತಿ ವ್ಯವಸ್ಥೆಯಲ್ಲಿ ಇದು ಅತ್ಯಂತ ಮಹತ್ವವಾದುದು ಎಂದರು.

ಸಿಜೆಐ ಚಂದ್ರಚೂಡರ ನೇತೃತ್ವದ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಈ ವಿಚಾರದಲ್ಲಿದ್ದಂತಹ ಎಲ್ಲಾ ಗೊಂದಲಗಳಿಗೆ ತೆರೆ ಎಳೆಯಲಾಗಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳಾದ ಹನುಮಂತಪ್ಪ ಅಣಜಿ, ಹರಿಹರ ಪಿ.ಜಿ. ಮಹಾಂತೇಶ್, ನಾಗರಾಜ ಬಿ. ಚಿತ್ತಾನಹಳ್ಳಿ, ಹನುಮಂತಪ್ಪ ಬೇತೂರು, ಕೆ. ವಿಜಯಲಕ್ಷ್ಮಿ ಸೇರಿದಂತೆ ಅನೇಕರಿದ್ದರು.




## ಹೃದಯಪೂರ್ವಕ ಅಭಿನಂದನೆಗಳು



'ಅಖಿಲ ಭಾರತ ವೀರಶೈವ ಮಹಾಸಭಾ'ದ

ರಾಷ್ಟ್ರೀಯ ಅಧ್ಯಕ್ಷರಾಗಿ ಸತತ ಮೂರನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿರುವ ಹಿರಿಯ ಶಾಸಕರಾದ

**ಡಾ॥ ಶಾಮನೂರು ಶಿವಶಂಕರಪ್ಪಾಜಿ**

ಅವರಿಗೆ ಪಂಚಾಚಾರ್ಯ ಸೇವಾ ಟ್ರಸ್ಟ್ ಹಾಗೂ ಅಕ್ಕಿ ವರ್ತಕರಿಂದ ಸನ್ಮಾನ ಮಾಡಲಾಯಿತು.

ಶುಭಾಶಯ ಕೋರುವವರು

• ಎಸ್.ಜಿ. ಉಳವಯ್ಯ • ಎಂ.ವಿ. ಜಯಪ್ರಕಾಶ್ ಮಾಗಿ
• ಜಿ.ವಿ.ಸಿದ್ದೇಶ್, • ಜಿ.ಬಿ. ಉಮೇಶ • ಜಿ.ಎಸ್. ವೀರಣ್ಣ
• ಹಂಪಯ್ಯಸ್ವಾಮಿ ಹಿರೇಮಠ • ಹರೀಶ ಎಂ.ಎನ್. • ರುದ್ರಮುನಿ ಹಿರೇಮಠ
• ಕೆ. ಬಸವಲಿಂಗಪ್ಪ • ಕೆ.ಆರ್. ಕೊಟ್ರೇಶ್ • ವಿನಾಯಕ
• ಬ್ಯಾಡಗಿ ಜಯರಾಜ • ಪಿ.ಎಂ. ಜಗದೀಶ್ • ಮಹೇಶ್ ಜಿ.ಎಸ್.




## ಸಹಸ್ರಾರ್ಜುನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ದೇವಸ್ಥಾನದ ರಸ್ತೆ, ಹರಿಹರ-577 601. ಫೋ. : 08192 242369

**2023-24ನೇ ಸಾಲಿನ 25ನೇ ವರ್ಷದ ವಾರ್ಷಿಕ ಮಹಾಸಭೆಯ ಆಹ್ವಾನ**

ಮಾನ್ಯ ಸಹಕಾರಿ ಸದಸ್ಯರೇ, ಮೇಲ್ಕಂಡ ಸಂಘದ 2023-24ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ : 14.09.2024ನೇ ಶನಿವಾರ ಬೆಳಗ್ಗೆ 11.00 ಘಂಟೆಗೆ "ಕಾಟ್ವೆ ಭವನ" 5ನೇ ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆ, ಹೆಚ್.ಎಸ್. ಬಡಾವಣೆ, ಹರಿಹರದಲ್ಲಿ ಸಂಘದ ಅಧ್ಯಕ್ಷರಾದ ಶ್ರೀರಾಘವೇಂದ್ರಸಾ ಆರ್.ಎಂ. ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಂಘದ ಎಲ್ಲಾ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.

**ಪದಾಧಿಕಾರಿಗಳು :**



ಶ್ರೀ ರಾಘವೇಂದ್ರಸಾ ಆರ್.ಎಂ. ಡಿ. ಫಾರ್ಮಾ,ಅಧ್ಯಕ್ಷರು | ಶ್ರೀ ಕೃಷ್ಣಸಾ ಆರ್, ಪೂಜಾರಿ ಉಪಾಧ್ಯಕ್ಷರು | ಶ್ರೀ ಬಿ. ರೇವಣಸಾ B.Sc.,B.L. ನಿರ್ದೇಶಕರು | ಶ್ರೀ ರಮೇಶ್ ಎಸ್. ಕಾಟ್ವೆ ನಿರ್ದೇಶಕರು | ಶ್ರೀಮತಿ ಸೇವಂತಿ ಕೆ. ಭೂತೆ ನಿರ್ದೇಶಕರು | ಶ್ರೀ ನಾರಾಯಣಸಾ ಗುಜರಾತಿ, ನಿರ್ದೇಶಕರು




ಶ್ರೀ ತುಳಜಾರಾಮ್ ಎಂ. ನಿರ್ದೇಶಕರು | ಕುಮಾರಿ ಶೋಭಾದೇವಿ ಎಂ.ಕಾಂ., ನಿರ್ದೇಶಕರು | ಶ್ರೀ ಮೋಹನ್ ಟಿ.ಎಂ. ನಿರ್ದೇಶಕರು | ಶ್ರೀ ವಿಠ್ಠಲ್ ಎಂ. ಭೂತೆ ನಿರ್ದೇಶಕರು | ಶ್ರೀ ಶಶಿಧರ ಡಿ. ಅನ್ವೇರಿ ನಿರ್ದೇಶಕರು | ಶ್ರೀ ಹನುಮಂತರಾಜು ಎಸ್.ಟಿ. ನಿರ್ದೇಶಕರು | ಶ್ರೀಮತಿ ನಂದಾ ವಿ. ಕಾಟ್ವೆ ಬಿ.ಕಾಂ. ಕಾರ್ಯನಿರ್ವಾಹಕರು

ವಿಶೇಷ ಸೂಚನೆ: ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಸದಸ್ಯರು ಸಭೆಗೆ ಬರುವಾಗ ಕಡ್ಡಾಯವಾಗಿ ಗುರುತಿನ ಚೀಟಿಯನ್ನು ತಂದು ಸಂಘದ ಹಾಜರಿ ಪುಸ್ತಕದಲ್ಲಿ ಸಹಿ ಮಾಡಲು ವಿನಂತಿ.

ಸಹಿ/- ಅಧ್ಯಕ್ಷರು, ಸಹಸ್ರಾರ್ಜುನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್, ಹರಿಹರ.

## ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಜನನ : 21-03-1951

ನಿಧನ : 13-09-2020

ಉಸಿರು ಹೋದರೂ ಹೆಸರು ಉಳಿಸಿದ

**ಲಿಂ॥ ಶ್ರೀ ಹಾಲೋಳ್ ಹೆಚ್.ಬಿ. ಹನುಮಂತಪ್ಪನವರು**

(ತೋಟದ ಮನೆ)

ನೀವು ನಮ್ಮನ್ನಗಲಿ ನಾಲ್ಕು ವರ್ಷಗಳೂ ಕಳೆದರೂ, ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

✦ ಪತ್ನಿ : ಶ್ರೀಮತಿ ಕಮಲಮ್ಮ ಹೆಚ್.ಬಿ. ಹನುಮಂತಪ್ಪ
✦ ಮಕ್ಕಳಾದ : ಶ್ರೀ ಹಾಲೋಳ್ ತೋಟದ ಭೀಮೇಶ್.
ಶ್ರೀ ಹಾಲೋಳ್ ತೋಟದ ಬಸವರಾಜ್,
ಶ್ರೀ ಹಾಲೋಳ್ ತೋಟದ ಈಶ್ವರ್ ಹಾಗೂ ಸೊಸೆಯಂದಿರು,
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು,

ತೋಟದ ಮನೆಯವರ ಸಮಸ್ತ ಕುಟುಂಬ ವರ್ಗ ಹಾಗೂ ನಿಟುವಳ್ಳಿ ಗ್ರಾಮಸ್ಥರು


ಅಂತಾರಾಷ್ಟ್ರೀಯ
ಪ್ರಜಾಪ್ರಭುತ್ವ
ದಿನಾಚರಣೆ
ಕರ್ನಾಟಕ ಸರ್ಕಾರ
ಸ್ವಾತಂತ್ರ್ಯ
ಸಮಾನತೆ
ಭ್ರಾತೃತ್ವ
ಬನ್ನಿ, ಪ್ರಜಾಪ್ರಭುತ್ವಕ್ಕಾಗಿ ಕೈ ಜೋಡಿಸೋಣ
ಬೀದರ್‌ನಿಂದ ಚಾಮರಾಜನಗರದವರೆಗಿನ
ಅತಿ ಉದ್ದದ
ಮಾನವ ಸರಪಳಿ
ಕರ್ನಾಟಕ ಸರ್ಕಾರವು ರೋಟರಿ ಇಂಟರ್‌ನ್ಯಾಶನಲ್ / ಸಿವಿಲ್ ಸೊಸೈಟಿ / ಎನ್‌ಜಿಒಗಳ ಸಹಯೋಗದೊಂದಿಗೆ ಆಯೋಜಿಸಿದೆ
15 ಸೆಪ್ಟೆಂಬರ್ 2024, ಬೆಳಿಗ್ಗೆ 9.30 ಗಂಟೆಯಿಂದ 10.00 ರವರೆಗೆ
2,500 ಕಿ.ಮೀ
25 ಲಕ್ಷ ಜನರು
10 ಲಕ್ಷ ಸಸಿಗಳು
5,000 ಪೀಠಿಕೆಗಳು
Bidar
Kalaburgi
Vijayapura
Yadgir
Bagalkote
Raichur
Belagavi
Dharwad
Gadag
Koppal
Ballari
Uttara Kannada
Haveri
Vijayanagara
Davanagere
Chitradurga
Tumakuru
Shivamogga
Udupi
Chikkamagaluru
Hassan
Dakshina Kannada
Kodagu
Chikkaballapura
Bengaluru (Rural)
Bengaluru (Urban)
Kolara
Ramanagara
Mandya
Mysuru
Chamarajanagara
ಭಾಗವಹಿಸುವ ಎಲ್ಲರಿಗೂ ತಮ್ಮ ಭಾವಚಿತ್ರವುಳ್ಳ ಪ್ರಮಾಣಪತ್ರವನ್ನು ನೀಡಲಾಗುವುದು
ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು
ಪರಿಶೀಲನಾ ಸಭೆ ನಡೆಸುತ್ತಿರುವುದು
ಮಾರ್ಗ ನಕ್ಷೆ ಮತ್ತು ಹೆಚ್ಚಿನ ವಿವರಗಳಿಗೆ ಕ್ಯೂ.ಆರ್. ಕೋಡ್ ಸ್ಕ್ಯಾನ್ ಮಾಡಿ
ಸಮಾಜ ಕಲ್ಯಾಣ ಇಲಾಖೆ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ನಗರಾಭಿವೃದ್ಧಿ ಇಲಾಖೆ | ಉನ್ನತ ಶಿಕ್ಷಣ ಇಲಾಖೆ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ
"ಸಂವಿಧಾನವನ್ನು ಪಾಲಿಸುವುದು, ಅದರ ಆಶಯಗಳನ್ನು ಗೌರವಿಸುವುದು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು, ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು
ConstitutionGok
https://www.democracydaykarnataka.in
9482 300 400
ಕರ್ನಾಟಕ ವಾರ್ತೆ

# ವಾರ್ತಾ ಇಲಾಖೆ ಸಹಯೋಗದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಿಕಾ ದಿನಾಚರಣೆ



ಮಂಜುನಾಥ್ ಕಾಡಜ್ಜಿ | ಬಸವರಾಜ ದೊಡ್ಮನಿ | ವಿಜಯ ಜಾಧವ್ | ಕೆ.ಜೆ. ದಾನೇಶ್ | ಹೆಚ್. ನಿಂಗಪ್ಪ | ಹೆಚ್.ಜಿ. ರುದ್ರೇಶಿ | ಮಹೇಶ್ ಕಾಶೀಪುರ | ಟಿ.ಕೆ. ದಿನೇಶ್ ಬಾಬು | ಇನಾಯತ್ ಉಲ್ಲಾ | ಮೃತ್ಯುಂಜಯ ಪಾಟೀಲ್ | ಜಗಳೂರಿನ ಕೊಟ್ರೇಶ್ | ಟಿ.ಎನ್. ಜಗದೀಶ್ | ಶಾಸ್ತ್ರಿ ಹೊಳೆಮಠ

ದಾವಣಗೆರೆ, ಸೆ. 12- ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದೊಂದಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ವತಿಯಿಂದ ನಾಳೆ ದಿನಾಂಕ 13ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಪತ್ರಿಕೆಯೊಂದರ ತಯಾರಿಕೆಯ ಹಿಂದಿರುವ ಎಲ್ಲಾ ಎಂಟು ವಿಭಾಗಗಳಿಂದ ಒಬ್ಬೊಬ್ಬರಂತೆ ಹಿರಿಯ ಶ್ರಮಿಕರಿಗೆ ಮಾಧ್ಯಮ ಮಾಣಿಕ್ಯ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಜೊತೆಗೆ, ದಾವಣಗೆರೆ ಜಿಲ್ಲೆಯ ಪತ್ರಕರ್ತರ ಪ್ರತಿಭಾನ್ವಿತ ಮಕ್ಕಳಿಗೆ ತಲಾ ಒಂದು ಸಾವಿರ ರೂ. ನಗದಿನೊಂದಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತದೆ ಎಂದು ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಜೊತೆಗೆ, ಪತ್ರಕರ್ತ ಸಾಧಕರನ್ನು ಅಭಿನಂದಿಸಲಾಗುತ್ತದೆ. ದಾವಣಗೆರೆ ವಿಶ್ವವಿದ್ಯಾನಿಲಯದ ಬಿ.ಎಸ್.ಸಿ. ಪಠ್ಯಕ್ಕೆ ಹಿರಿಯ ಪತ್ರಕರ್ತರೂ ಆಗಿರುವ ಸಾಹಿತಿ ಬಿ.ಎನ್. ಮಲ್ಲೇಶ್ ಅವರ 'ಉತ್ತರೆ ಮಳೆ' ಕವಿತೆ ಆಯ್ಕೆಯಾಗಿದ್ದು, ಅವರೊಂದಿಗೆ, ದಾವಣಗೆರೆ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿರುವ ಹಿರಿಯ ಪತ್ರಿಕಾ ವ್ಯಂಗ್ಯಚಿತ್ರಕಾರ ಹೆಚ್.ಬಿ. ಮಂಜುನಾಥ್, ಜಿಲ್ಲಾ ವರದಿಗಾರರ ಕೂಟದ ನೂತನ ಅಧ್ಯಕ್ಷ 'ಕನ್ನಡಪ್ರಭ'ದ ಜಿಲ್ಲಾ ಹಿರಿಯ ಪತ್ರಕರ್ತ ನಾಗರಾಜ್ ಎಸ್. ಬಡದಾಳ್, ಚನ್ನಗಿರಿ ತಾಲ್ಲೂಕು ಕೆಯುಡಬ್ಲ್ಯುಜೆ ನೂತನ ಅಧ್ಯಕ್ಷ ವಿ. ಲಿಂಗರಾಜು ಅವರುಗಳನ್ನು ಗೌರವಿಸಲಾಗುತ್ತದೆ.

## ನಗರದಲ್ಲಿ ಇಂದು

- ➡ ಪತ್ರಕರ್ತರಿಗೆ ಮಾಧ್ಯಮ ಮಾಣಿಕ್ಯ ಪ್ರಶಸ್ತಿ ಪ್ರದಾನ
- ➡ ಪತ್ರಕರ್ತರ ಪ್ರತಿಭಾನ್ವಿತ ಮಕ್ಕಳಿಗೆ ಪುರಸ್ಕಾರ
- ➡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸರ್ವ ಸದಸ್ಯರ ಮಹಾಸಭೆ
- ➡ ಸಚಿವ ಎಸ್ಸೆಸ್ಸೆಂ ಅವರಿಂದ ಸಾಧಕ ಪತ್ರಕರ್ತರಿಗೆ ಗೌರವಾರ್ಪಣೆ
- ➡ ಸಿ.ಎಂ. ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರಿಂದ ಪ್ರಶಸ್ತಿ ಪ್ರದಾನ
- ➡ ಕುಲಪತಿ ಪ್ರೊ. ಬಿ.ಕೆ. ರವಿ ಅವರಿಂದ ವಿಶೇಷ ಉಪನ್ಯಾಸ
- ➡ ಕೆಯುಡಬ್ಲ್ಯುಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರಿಂದ ಆಶಯ ನುಡಿ
- ➡ ಹಿರಿಯ ಅಧ್ಯಾತ್ಮಿಕ ಚೇತನ ಬ್ರಹ್ಮಾಕುಮಾರಿ ಅನಸೂಯಾಜಿ ಸಾನ್ನಿಧ್ಯ
- ➡ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಂದ ಕಾರ್ಯಕ್ರಮದ ಉದ್ಘಾಟನೆ

**ಪ್ರಶಸ್ತಿ ಪುರಸ್ಕೃತರು :** ಮುದ್ರಣ ಮಾಧ್ಯಮ ವಿಭಾಗದಿಂದ 'ಸಂಯುಕ್ತ ಕರ್ನಾಟಕ'ದ ಹಿರಿಯ ಉಪಸಂಪಾದಕ ಮಂಜುನಾಥ್ ಪಿ. ಕಾಡಜ್ಜಿ, ವಿದ್ಯುನ್ಮಾನ ಮಾಧ್ಯಮ ವಿಭಾಗದಿಂದ 'ಟಿವಿ9' ಜಿಲ್ಲಾ ಹಿರಿಯ ಪತ್ರಕರ್ತ ಬಸವರಾಜ್ ದೊಡ್ಮನಿ, ಛಾಯಾಗ್ರಹಣ ವಿಭಾಗದಲ್ಲಿ 'ಸುವರ್ಣ ಟೈಮ್ಸ್ ಆಫ್ ಕರ್ನಾಟಕ'ದ ವಿಜಯಕುಮಾರ್ ಜಾಧವ್, ಡಿಟಿಪಿ / ಡಿಸೈನರ್ ವಿಭಾಗದಲ್ಲಿ 'ವಿಜಯ ಕರ್ನಾಟಕ'ದ ಕೆ.ಜೆ. ದಾನೇಶ್, ಕಛೇರಿ ಸಿಬ್ಬಂದಿ ವಿಭಾಗದಲ್ಲಿ 'ಜನತಾವಾಣಿ'ಯ ಕರಡು ತಿದ್ದುಪಡಿಯ ಹೆಚ್. ನಿಂಗಪ್ಪ, ಜಾಹೀರಾತು ವಿಭಾಗದಲ್ಲಿ 'ಶ್ವೇತಾ ಅಡ್ವರ್ಟೈಸರ್ಸ್' ಮಾಲೀಕ ಹೆಚ್.ಜಿ. ರುದ್ರೇಶಿ, ಮುದ್ರಣ ವಿಭಾಗದಲ್ಲಿ 'ನಗರವಾಣಿ'ಯ ಎಸ್.ಎನ್. ಮಹೇಶ್ ಕಾಶೀಪುರ, ಪತ್ರಿಕೆ ವಿತರಣಾ ವಿಭಾಗದಲ್ಲಿ ಹಿರಿಯ ಪತ್ರಿಕಾ ವಿತರಕ ಟಿ.ಕೆ. ದಿನೇಶ್ ಬಾಬು ಅವರುಗಳಿಗೆ ಮಾಧ್ಯಮ ಮಾಣಿಕ್ಯ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಒಬ್ಬೊಬ್ಬರಂತೆ ಐವರು ಹಿರಿಯ ಪತ್ರಕರ್ತರನ್ನು ಮಾಧ್ಯಮ ಮಾಣಿಕ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಹರಿಹರದಿಂದ 'ಪ್ರಜಾವಾಣಿ'ಯ ಹಿರಿಯ ಪತ್ರಕರ್ತರೂ ಆಗಿರುವ ನ್ಯಾಯವಾದಿ ಇನಾಯತ್ ಉಲ್ಲಾ, ಹೊನ್ನಾಳಿಯಿಂದ 'ಜನತಾವಾಣಿ'ಯ ಹೆಚ್.ಸಿ. ಮೃತ್ಯುಂಜಯ ಪಾಟೀಲ್, ಜಗಳೂರಿನ 'ನನ್ನ ಮಿತ್ರ' ಸಂಪಾದಕ ಅಣಬೂರು ಮಠದ ಕೊಟ್ರೇಶ್, ಚನ್ನಗಿರಿಯಿಂದ 'ವಿಜಯವಾಣಿ'ಯ ಟಿ.ಎನ್. ಜಗದೀಶ್, ನ್ಯಾಮತಿ ತಾಲ್ಲೂಕಿನಿಂದ 'ವಿಜಯ ಕರ್ನಾಟಕ'ದ ಎಂ.ಎಸ್. ಶಾಸ್ತ್ರಿ ಹೊಳೆಮಠ ಅವರುಗಳನ್ನು ಗೌರವಿಸಲಾಗುತ್ತದೆ.

ಎಲ್ಲಾ ಪ್ರಶಸ್ತಿ ಪುರಸ್ಕೃತರನ್ನು ತಲಾ ಎರಡೂವರೆ ಸಾವಿರ ನಗದಿನೊಂದಿಗೆ, ಶಾಲು, ಹಾರ, ಪೇಟ ತೊಡಿಸಿ ಸ್ಮರಣಿಕೆಯೊಂದಿಗೆ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಗುತ್ತದೆ.

**ಸಭಾ ಕಾರ್ಯಕ್ರಮ :** ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶಿವಮೊಗ್ಗ ಶಾಖೆ ಸಂಚಾಲಕರೂ ಆಗಿರುವ ಹಿರಿಯ ಅಧ್ಯಾತ್ಮಿಕ ಚೇತನ ರಾಜಯೋಗಿನಿ ಬ್ರಹ್ಮಾಕುಮಾರಿ ಅನಸೂಯಾಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರು 'ಮಾಧ್ಯಮ ಮಾಣಿಕ್ಯ ಪ್ರಶಸ್ತಿಯನ್ನು, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು 'ಸಾಧಕರಿಗೆ ಗೌರವಾರ್ಪಣೆ', ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು 'ಪ್ರತಿಭಾ ಪುರಸ್ಕಾರ' ಪ್ರದಾನ ಮಾಡಲಿದ್ದಾರೆ. ಪತ್ರಿಕೋದ್ಯಮದ ಕುರಿತಂತೆ ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಕೆ. ರವಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಅಧ್ಯಕ್ಷತೆ ವಹಿಸಲಿದ್ದು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರನ್ನು ಸನ್ಮಾನಿಸಲಾಗುತ್ತದೆ. ಕೆಯುಡಬ್ಲ್ಯುಜೆ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಜಿಲ್ಲಾ ವಾರ್ತಾಧಿಕಾರಿ ಬಿ. ಧನಂಜಯಪ್ಪ, ಕೆಯುಡಬ್ಲ್ಯುಜೆ ರಾಜ್ಯ ಕಾರ್ಯದರ್ಶಿ ನಿಂಗಪ್ಪ ಚಾವಡಿ ಮುಖ್ಯ ಅತಿಥಿಗಳಾಗಿದ್ದಾರೆ.

**ಸರ್ವಸದಸ್ಯರ ಮಹಾಸಭೆ :** ಕಾರ್ಯಕ್ರಮಕ್ಕೂ ಮೊದಲು ಮಧ್ಯಾಹ್ನ 2 ಗಂಟೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ 2023-24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಏರ್ಪಾಡಾಗಿದ್ದು, ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ವಾರ್ಷಿಕ ವರದಿ ಮಂಡಿಸಲಿದ್ದಾರೆ. ಖಜಾಂಚಿ ಎನ್.ವಿ. ಬದರಿನಾಥ್ ಲೆಕ್ಕಪತ್ರ ಮಂಡಿಸುವರು.

ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಬಡದಾಳ್, ಕಾನಿಪ ಸಂಘದ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ಖಜಾಂಚಿ ಎನ್.ವಿ. ಬದರಿನಾಥ್, ಉಪಾಧ್ಯಕ್ಷ ಆರ್.ಎಸ್. ತಿಪ್ಪೇಸ್ವಾಮಿ, ಕಾರ್ಯದರ್ಶಿ ಜೆ.ಎಸ್. ವೀರೇಶ್, ಕಾರ್ಯಕಾರಿ ಸಮಿತಿ ಸದಸ್ಯ ಸಿ.ವೇದಮೂರ್ತಿ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



## ಏಳನೇ ವೇತನ ಜಾರಿಗೊಳಿಸಲು ನಿವೃತ್ತ ನೌಕರರ ಸಂಘದ ಒತ್ತಾಯ

**ಹರಪನಹಳ್ಳಿ**

ಹರಪನಹಳ್ಳಿ, ಸೆ. 12 - ಏಳನೇ ವೇತನ ಜಾರಿಗೊಳಿಸುವಂತೆ ಒತ್ತಾಯಿಸಿ ಸರ್ಕಾರಿ ನಿವೃತ್ತ ನೌಕರರ ಭಾದಿತ ನೌಕರರ ಸಂಘದ ವತಿಯಿಂದ ಮನವಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಇವೇಳೆ ಸರ್ಕಾರಿ ನಿವೃತ್ತ ನೌಕರರ ಬಾಧಿತ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಶೇಖರಗೌಡ ಪಾಟೀಲ ಮಾತನಾಡಿ ರಾಜ್ಯಸರ್ಕಾರ ಏಳನೇ ವೇತನ ಆಯೋಗದ ವರದಿಯ ಶಿಫಾರಸುಗಳನ್ನು ಅನುಷ್ಠಾನ ಆದೇಶದಲ್ಲಿ ದಿನಾಂಕ 1.7.22ರಿಂದ 1.7.24 ರ, ಮಧ್ಯದ ಅವಧಿಯಲ್ಲಿ ನಿವೃತ್ತ ನೌಕರರಿಗೆ ಆರ್ಥಿಕ ಸೌಲಭ್ಯ ನೀಡುವಲ್ಲಿ ತಾರತಮ್ಯವಾಗಿದ್ದನ್ನು ಸರ್ಕಾರ ಮನಗಂಡು ಈ ಕೂಡಲೇ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ನಿವೃತ್ತ ನೌಕರರ ಭಾಧಿತ ನೌಕರರ ಜಿಲ್ಲಾ ಸಂಚಾಲಕ ಸಿದ್ಲಿಂಗಗೌಡ ಮಾತನಾಡಿ ನಮಗೆ ಅನುಷ್ಟಾನ ಗೊಳಿಸಿದ 7ನೇ ಆಯೋಗದ ವರದಿಯಲ್ಲಿ 1-7-22ರಿಂದ1-7-24 ದೊಳಗಿನ ಅವದಿ ಒಟ್ಟು 25 ತಿಂಗಳಲ್ಲಿ ತಾರತಮ್ಯ ವನ್ನು ಸರ್ಕಾರ ಪರಿಶೀಲಿಸಿ ತಾರತಮ್ಯ ಸರಿಪಡಿಸಕೊಡಬೇಕೆಂದು, ಮೊದಲನೆಯ ಹೆಜ್ಜೆಯಾಗಿ ಮನವಿ ಅರ್ಪಿಸಲಾಗಿದೆ. ಮುಂದಿನ ದಿನಮಾನದಲ್ಲಿ ಉಗ್ರವಾದ ಹೋರಾಟಕ್ಕೆ ಬಾಧಿತ ನಿವೃತ್ತ ನೌಕರರು ಇಳಿಯಬೇಕಾಗುತ್ತದೆಂದು ಸರ್ಕಾರಕ್ಕೆ ಎಚ್ಚರಿಸಿದರು.

ಇವೇಳೆ ಬಾಧಿತ ನೌಕರರ ಮುಖ್ಯ ಸಂಚಾಲಕರಾದ ಶಿವಾನಂದಪ್ಪ ಕೌಟಿ,ತಾಲೂಕು ಸಂಚಾಲಕ ರಾದ ಮೂರ್ತಿ ನಾಯ್ಕ, ದೇವಿಂದ್ರಗೌಡ, ತಿಪ್ಪೇರುದ್ರಪ್ಪ,ಐ ಕೊಟ್ರಪ್ಪ, ನಿವೃತ್ತ ನೌಕರರ ಸಂಘದ ಕಾರ್ಯದರ್ಶಿ ಕೆ .ಕೊಟ್ರಪ್ಪ, ಸಂಘಟನಾ ಕಾರ್ಯದರ್ಶಿ ಬಿ.ಶೇಖರಪ್ಪ ಬಾಧಿತ ಮಹಿಳಾ ನೌಕರರು ಹಾಗೂ ಮುಂತಾದವರಿದ್ದರು.

## ಕಾಡಾ ಅಧ್ಯಕ್ಷರನ್ನಾಗಿ ಎನ್.ಜಿ. ಪುಟ್ಟಸ್ವಾಮಿ ಆಯ್ಕೆಗೆ ಆಗ್ರಹ



ದಾವಣಗೆರೆ, ಸೆ.12- ಮಧ್ಯ ಕರ್ನಾಟಕದ ಜೀವ ನಾಡಿ ಭದ್ರಾ ಜಲಾಶಯದ ಬಲದಂಡೆ ನಾಲೆಗೆ ಜಿಲ್ಲೆಯ ಅನೇಕ ಜಮೀನುಗಳು ಒಳಪಡುತ್ತವೆ. ಅದರಲ್ಲಿ ದಾವಣಗೆರೆ ಜಿಲ್ಲೆಯು ಅತೀ ಹೆಚ್ಚಿನ ಅಂದರೆ ಜಿಲ್ಲೆಯ ಸುಮಾರು 85 ಸಾವಿರ ಹೆಕ್ಟೇರಿಗಿಂತ ಹೆಚ್ಚಿನ ಜಮೀನುಗಳು ಭದ್ರಾ ಅಚ್ಚುಕಟ್ಟಿನ ಬಲದಂಡೆ ನಾಲೆಗೆ ಸೇರುತ್ತವೆ. ಅಲ್ಲದೇ, ಅಚ್ಚುಕಟ್ಟಿನ ಬಲದಂಡೆ ನಾಲೆಗೆ ಕೆಳ ಭಾಗದ ಜಿಲ್ಲೆಗಳಾದ ದಾವಣಗೆರೆ, ವಿಜಯನಗರ, ಹಾವೇರಿ ಮತ್ತು ಗದಗ ಜಿಲ್ಲೆಗಳು ಸೇರುತ್ತವೆ.

ಆದರೆ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರವು 1984-85 ರಲ್ಲಿ ಅಸ್ತಿತ್ವಕ್ಕೆ ಬಂದಾಗಿನಿಂದ ಇಲ್ಲಿಯವರೆಗೂ ಭದ್ರಾ ಅಚ್ಚುಕಟ್ಟಿನ ಕೆಳ ಭಾಗದ ರೈತರನ್ನು ಭದ್ರಾ ಕಾಡಾ ಅಧ್ಯಕ್ಷರನ್ನಾಗಿ ನೇಮಕ ಮಾಡದೇ ಇರುವುದು ಕೆಳ ಭಾಗದ ರೈತರಿಗೆ ಅನ್ಯಾಯ ಮಾಡಿದಂತಾಗಿದೆ.

ಜಿಲ್ಲೆಯ ಪ್ರಗತಿ ಪರ ಕೃಷಿಕ ಎನ್.ಜಿ. ಪುಟ್ಟಸ್ವಾಮಿ ಅವರನ್ನು ಕಾಡಾ ಅಧ್ಯಕ್ಷರನ್ನಾಗಿ ಮಾಡುವ ಮೂಲಕ ಇನ್ನಾದರೂ ಜಿಲ್ಲೆಯ ಈ ಭಾಗದ ಜನತೆಗೆ ನ್ಯಾಯ ಒದಗಿಸಬೇಕು ಎಂದು ವಕೀಲರು, ರೈತರ ಪರ ಚಿಂತಕ ಕೊಂಡಜ್ಜಿ ಬಣಕಾರ್ ಶಿವಕುಮಾರ್ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.


**ದಾವಣಗೆರೆ ಶ್ರೀ ಹಾಲುಮತ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ದಾವಣಗೆರೆ.**

#76/2, ಮೊದಲನೇ ಮಹಡಿ, ಎ.ವಿ.ಕೆ. ಕಾಲೇಜು ರಸ್ತೆ ಶ್ರೀ ರಾಮಪಾರ್ಕ್ ಹತ್ತಿರ, ದಾವಣಗೆರೆ.

**2023-2024ನೇ ಸಾಲಿನ ವಾರ್ಷಿಕ ವರದಿ ಮತ್ತು ಮಹಾಸಭೆಯ ಆಹ್ವಾನ ಪತ್ರಿಕೆ**

ದಾವಣಗೆರೆ ಶ್ರೀ ಹಾಲುಮತ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ., ಇದರ 2023-2024ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 14.09.2024ನೇ ಶನಿವಾರ ಬೆಳಿಗ್ಗೆ 11.30ಕ್ಕೆ ಶ್ರೀಮತಿ ಗೌರಮ್ಮ ನರಹರಿ ಶೇಟ್ ಮಿನಿ ಸಭಾ ಭವನ, ವಿನೋಬ ನಗರ, 1ನೇ ಮೇನ್, ಪಿ.ಬಿ. ರಸ್ತೆ, ದಾವಣಗೆರೆ ಇಲ್ಲಿ ಸಂಘದ ಅಧ್ಯಕ್ಷರಾದ ಹಾಲೇಕಲ್ ಶ್ರೀ ಎಸ್.ಎಂ. ಸಿದ್ದಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

*ವಿಶೇಷ ಸೂಚನೆ : ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.*

ಸಹಿ/- (ಶ್ರೀಮತಿ ಮಮತ ಎಂ.)
ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ


## ರಾಜೀನಾಮೆಗೆ ಸಿದ್ಧ ಎಂದ ಮಮತಾ

**(1ನೇ ಪುಟದಿಂದ)**ನಡೆಸಲು ಮಮತಾ ಬ್ಯಾನರ್ಜಿ ಮುಂದಾಗಿದ್ದರು.

ಆದರೆ ಅವರು ಸುಮಾರು 2 ಗಂಟೆಗಳ ಕಾಲ ಕಾದರೂ ಮುಷ್ಕರ ನಿರತ ವೈದ್ಯರು ಭೇಟಿಗೆ ಬರಲಿಲ್ಲ.

ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಮತಾ ಬ್ಯಾನರ್ಜಿ, ಕರ್ತವ್ಯದಲ್ಲಿ ತೊಡಗುವಂತೆ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನವನ್ನು ವೈದ್ಯರು ಉಲ್ಲಂಘಿಸಿದ್ದಾರೆ. ಆದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು.

ಮಮತಾ ಬ್ಯಾನರ್ಜಿ ಆಹ್ವಾನದ ಹಿನ್ನೆಲೆಯಲ್ಲಿ ವೈದ್ಯರು ರಾಜ್ಯ ಸಚಿವಾಲಯದ ಗೇಟುಗಳವರೆಗೂ ಬಂದರು. ಆದರೆ, ಈ ಭೇಟಿಯ ನೇರ ಪ್ರಸಾರ ಮಾಡದ ಹೊರತು ಮಾತುಕತೆಗೆ ಬರುವುದಿಲ್ಲ ಎಂದು ಪಟ್ಟು ಹಿಡಿದರು. ಆದರೆ, ಈ ವಿಷಯ ನ್ಯಾಯಾಲಯದ ಎದುರಿದೆ. ಹೀಗಾಗಿ ನೇರ ಪ್ರಸಾರ ಸಾಧ್ಯವಾಗದು. ಭೇಟಿಯನ್ನು ವಿಡಿಯೋದಲ್ಲಿ ದಾಖಲಿಸಿ ಸುಪ್ರೀಂ ಕೋರ್ಟಿಗೆ ಸಲ್ಲಿಸಲಾಗುವುದು. ಅಗತ್ಯವಾದಲ್ಲಿ ಸುಪ್ರೀಂ ಕೋರ್ಟ್ ಅನುಮತಿಯೊಂದಿಗೆ ವೈದ್ಯರಿಗೆ ನೀಡಲಾಗುವುದು ಎಂದು ಹೇಳಿದರು. ಆದರೂ ವೈದ್ಯರ ಜೊತೆ ಮಾತುಕತೆ ಸಾಧ್ಯವಾಗಲಿಲ್ಲ.

## ಪಿಎಸ್ಐ ಪರೀಕ್ಷೆ ಮತ್ತೆ ಮುಂದೂಡಿಕೆ !

**(1ನೇ ಪುಟದಿಂದ)** ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಗೃಹ ಸಚಿವರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 402 ಪಿಎಸ್ಐ ಹುದ್ದೆಗಳಿಗೆ ಸೆ.22ರಂದು ನಡೆಸಲು ಉದ್ದೇಶಿಸಿದ್ದ ಪರೀಕ್ಷೆಯನ್ನು ಮುಂದೂಡಲಾಗಿದೆ. ಸೆ.28ರಂದು ಪರೀಕ್ಷೆ ನಡೆಸುವುದಾಗಿ ಹೇಳಲಾಗಿತ್ತು. ಆದರೆ ಆ ದಿನವೂ ಯುಪಿಎಸ್‌ಸಿ ಪರೀಕ್ಷೆ ಇರುವ ಕಾರಣ ಮತ್ತೊಂದು ದಿನಾಂಕದಂದು ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ ಎಂದಿದ್ದಾರೆ.


**ಭಾವನಾ ಸಹಕಾರ ಸಂಘ ನಿಯಮಿತ (ರಿ)**
ಬಿ.ಕೆ. ಹಾಸ್ಟೆಲ್ ಕಟ್ಟಡ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ-2

**9ನೇ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ**

ಮೇಲ್ಕಂಡ ಸಹಕಾರ ಸಂಘದ
**2023-24ನೇ ಸಾಲಿನ 9ನೇ ವಾರ್ಷಿಕ ಮಹಾಸಭೆಯನ್ನು**
**ದಿನಾಂಕ 14.09.2024ನೇ ಶನಿವಾರ ಬೆಳಿಗ್ಗೆ 11 ಕ್ಕೆ ಸಂಘದ ಅಧ್ಯಕ್ಷರಾದ**
**ಶ್ರೀ ಕೆ.ಬಿ. ಶಂಕರನಾರಾಯಣ**
ಅವರ ಅಧ್ಯಕ್ಷತೆಯಲ್ಲಿ **ಶ್ರೀ ನಾಮದೇವ ಭಜನಾ ಮಂದಿರ,**
**ದೊಡ್ಡಪೇಟೆ, ದಾವಣಗೆರೆ-577001** ಇಲ್ಲಿ ಏರ್ಪಡಿಸಲಾಗಿದೆ.
ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.
– ಆಡಳಿತ ಮಂಡಳಿ



AQUASHINE RO Water Purifiers




ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಫಿಲ್ಟರ್‌ಗಳನ್ನು ಸರ್ವೀಸ್ ಮಾಡಲಾಗುತ್ತದೆ.
ಹಾಗೂ ಹೋಲ್‌ಸೇಲ್ ದರದಲ್ಲಿ ಎಲ್ಲಾ ಬಿಡಿಭಾಗಗಳು ದೊರೆಯುತ್ತವೆ.

# 794/ಬಿ44, 1ನೇ ಕ್ರಾಸ್, ರಾಘವೇಂದ್ರ ಸ್ಕೂಲ್ ಹತ್ತಿರ, ಕೊಟ್ಟೂರೇಶ್ವರ ಬಡಾವಣೆ, ಡಿ.ಸಿ.ಎಂ. ರೋಡ್, ದಾವಣಗೆರೆ

ಮೊ : 99807 27767



**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಮಸ್ತ ನಾಗರಿಕರಿಗೆ ತಿಳಿಯಪಡಿಸುವುದೇನೆಂದರೆ, **ಟಿ.ಲಿಂಗರಾಜು,** ತಂದೆ : ಲೇಟ್ **ನಾಗರಾಜಪ್ಪ,** ಇವರು (ಪಿರ್ಯಾದುದಾರರು), **ಮುಕ್ತ ಪಿ.ಜೆ. ಕೋಂ ಶ್ರೀನಿವಾಸ ಯು.** ಇವರುಗಳು (ಆರೋಪಿ), ಇವರ ವಿರುದ್ಧ ದಾವಣಗೆರೆ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ಕೋರ್ಟ್‌ನಲ್ಲಿ ಖಾಸಗಿ ದೂರಿನ ಸಂಖ್ಯೆ: 431/2024 ಹಾಗೂ 432/2024 ನ್ನು ಸಲ್ಲಿಸಿ ಈ ಮೇಲೆ ತಿಳಿಸಿದ ಪಿರ್ಯಾದುದಾರರು ಈ ಮೇಲೆ ತಿಳಿಸಿದ ಆರೋಪಿಯಿಂದ ತಮಗೆ ಬರಬೇಕಾದ ರೂ. 20,00,000/- ಮೊತ್ತಕ್ಕೆ ಆರೋಪಿಯು ನೀಡಿದ ಕೆನರಾ ಬ್ಯಾಂಕ್, ವಿನೋಬನಗರ ಶಾಖೆ, ದಾವಣಗೆರೆಯ 10 ಲಕ್ಷದ 2 ಎರಡು ಚೆಕ್‌ಗಳನ್ನು ಅಂದರೆ ಚೆಕ್ ನಂ. 388091 ಮತ್ತು 388092ಕ್ಕೆ ಎರಡು ಚೆಕ್ಕುಗಳನ್ನು ಪಿರ್ಯಾದಿಗೆ ಆರೋಪಿಯು ನೀಡಿದ್ದು, ಸದರಿ ಚೆಕ್ಕುಗಳು ಬೌನ್ಸ್ ಆದ ಕಾರಣ ಪಿರ್ಯಾದುದಾರರು ಮೇಲೆ ತಿಳಿಸಿದ ಘನ ನ್ಯಾಯಾಲಯದಲ್ಲಿ ಮೇಲೆ ತಿಳಿಸಿದ ಆರೋಪಿಯ ಮೇಲೆ ಎರಡು ಕ್ರಿಮಿನಲ್ ಪ್ರಕರಣಗಳನ್ನು ಹೂಡಿದ್ದು, ಸದರಿ ಪ್ರಕರಣದಲ್ಲಿ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ದೊಡ್ಡಬೂದಿಹಾಳು ಗ್ರಾಮದ ಆಸ್ತಿ/ಸರ್ವೆ ನಂ. 56ರಲ್ಲಿ, ಹಾಲಿ ದಾವಣಗೆರೆ ಸಿಟಿ, ಕೊಂಡಜ್ಜಿ ರಸ್ತೆ, ಅಶೋಕ ನಗರದಲ್ಲಿ ಬರತಕ್ಕ ಆಸ್ತಿ ನಂ.56, ಸೈಟುಗಳ ಪೈಕಿ, ಸೈಟ್ ನಂ.93, ಅಳತೆ ಪೂರ್ವ-ಪಶ್ಚಿಮ 30 ಅಡಿ ಉತ್ತರ-ದಕ್ಷಿಣ 40 ಅಡಿಯಲ್ಲಿರುವ ಆರ್.ಸಿ.ಸಿ ಮನೆ, ಇದಕ್ಕೆ ಚಕ್ಕುಬಂದಿ:- ಪೂರ್ವಕ್ಕೆ: ಸೈಟ್ ನಂ.94, ಪಶ್ಚಿಮಕ್ಕೆ: ಸೈಟ್ ನಂ.92, ಉತ್ತರಕ್ಕೆ: ಸೈಟ್ ನಂ.10, ಹಾಗೂ ದಕ್ಷಿಣಕ್ಕೆ: 30 ಅಡಿ ಅಗಲದ ರಸ್ತೆ, ಈ ಆಸ್ತಿಯ ಮೇಲೆ ಚಾರ್ಜ್ ಮಾಡಲು ಘನ ನ್ಯಾಯಾಲಯದಲ್ಲಿ ಪಿರ್ಯಾದುದಾರರು ಕೇಳಿಕೊಂಡಿದ್ದು, ಸದರಿ ಪಿರ್ಯಾದಿ ಪರ ವಕೀಲರ ವಾದವನ್ನು ಆಲಿಸಿದ ಗೌರವಾನ್ವಿತ ನ್ಯಾಯಾಲಯವು ಆರೋಪಿಯ ಮೇಲೆ ನೋಟೀಸನ್ನು ಜಾರಿಗೊಳಿಸಿ ಕೇಸನ್ನು ದಿನಾಂಕ: 7.10.2024 ಕ್ಕೆ ಮುಂದೂಡಿರುತ್ತದೆ, ಪ್ರಸ್ತುತ ಈಗ ಈ ಪ್ರಕರಣದ ಸ್ವತ್ತನ್ನು ಆರೋಪಿಯು ಮಾರಲು, ಖಾತೆ ಬದಲಾವಣೆ ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡುವುದು ಬೆಳಕಿಗೆ ಬಂದಿರುತ್ತದೆ. ಈ ಮೇಲಿನ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಅಥವಾ ಯಾರಾದರೂ ಮಾರಾಟ ಪ್ರಕ್ರಿಯೆಯಲ್ಲಿ ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳಲ್ಲಿ ಆರೋಪಿಯ ಜೊತೆ ಸೇರಿ ಈ ಮೇಲೆ ತಿಳಿಸಿದ ಆಸ್ತಿಯ ಬಗ್ಗೆ ಪರಭಾರೆ ಪ್ರಕ್ರಿಯೆಯಲ್ಲಿ ತೊಡಗಿದರೆ ಅವರ ವಿರುದ್ಧ ಸೂಕ್ತ ಕಾನೂನಿನ ಕ್ರಮಗಳನ್ನು ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯತಕ್ಕದ್ದು. ಅಂತಹ ಪರಭಾರೆ ಪತ್ರಗಳು ಪಿರ್ಯಾದುದಾರರಿಗೆ ಯಾವುದೇ ರೀತಿಯಲ್ಲಿ ಬಾಧಕವಿರುವುದಿಲ್ಲ.

**ಕಕ್ಷಿದಾರರ ಸಹಿ/- (ಪಿರ್ಯಾದಿ)**
**ದಿನಾಂಕ : 12.9.2024**
**ಸ್ಥಳ: ದಾವಣಗೆರೆ. ಮೊ : 99006 36777**

**ಸಹಿ/- ಪಿರ್ಯಾದುದಾರರ ಪರ ವಕೀಲರು**
**(ಅಜಯ್.ಸಿ, (ಎಸಿ) ವಕೀಲರು, ದಾವಣಗೆರೆ)**
**ಫೋನ್ : 97430 19896**


## ವಿದ್ಯಾನಗರದಲ್ಲಿ ನಾಳೆ ಮಟ್ಟಿ ಆಂಜನೇಯ ಸ್ವಾಮಿ ಪರವು

ದಾವಣಗೆರೆ, ಸೆ. 12 - ವಿದ್ಯಾನಗರದ ಶ್ರೀ ಮಟ್ಟಿ ಆಂಜನೇಯ ಸ್ವಾಮಿಗೆ ಭಾದ್ರಪದ ಮಾಸದಲ್ಲಿ ಎಡೆ ಪರವು ಕಾರ್ಯಕ್ರಮವು ನಾಡಿದ್ದು ದಿನಾಂಕ 14ರ ಶನಿವಾರ ಬೆಳಿಗ್ಗೆ 8.30 ರಿಂದ 12.30ರವರೆಗೆ ಪೂಜಾ ಕಾರ್ಯಕ್ರಮ ಹಾಗೂ ಮಧ್ಯಾಹ್ನ 12.30ರಿಂದ ಸ್ವಾಮಿ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಇದರ ಅಂಗವಾಗಿ ನಾಳೆ ದಿನಾಂಕ 13ರ ಶುಕ್ರವಾರ ರಾತ್ರಿ ಶಾಮನೂರಿನ ಶ್ರೀ ಆಂಜನೇಯ ಸ್ವಾಮಿ, ಶ್ರೀ ಬಸವೇಶ್ವರ ಸ್ವಾಮಿಯ ಆಗಮನ ಹಾಗೂ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಭಜನಾ ಮಂಡಳಿ ವತಿಯಿಂದ ಅಹೋರಾತ್ರಿ ಭಜನಾ ಕಾರ್ಯಕ್ರಮ ನಡೆಯಲಿದೆ.

## ಎಲೆಬೇತೂರು ಅನ್ನ ಸಂತರ್ಪಣೆ

ಕರ್ನಾಟಕ ಗ್ರಾಮೀಣ ಬ್ಯಾಂಕ್ ಮುಂಭಾಗ (ಬಾವಿಕಟ್ಟೆ ಗಣಪ್ಪ ಎಂದೇ ಪ್ರಸಿದ್ಧಿ ಪಡೆದಿದ್ದು) ದಲ್ಲಿ ಶ್ರೀ ವಿನಾಯಕ ಸ್ನೇಹ ಬಳಗದಿಂದ ಶ್ರೀ ಗಣಪತಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಅದರ ಪ್ರಯುಕ್ತ ಇಂದು ಅನ್ನ ಸಂತರ್ಪಣೆ ನಡೆಯಲಿದೆ.

## ಆನಗೋಡಿನಲ್ಲಿ ಇಂದು ರೈತ ಹುತಾತ್ಮರ ಸ್ಮರಣೆ

ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ, ದಾವಣಗೆರೆ ಜಿಲ್ಲೆಯ ರೈತಪರ ಸಂಘಟನೆಗಳ ಸಹಯೋಗದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಆನಗೋಡು ಗ್ರಾಮದ ರಾಷ್ಟ್ರೀಯ ಹೆದ್ದಾರಿ ಬಳಿ (ಉಳುಪಿನಕಟ್ಟೆ ಕ್ರಾಸ್) ಇರುವ ರೈತ ಹುತಾತ್ಮರ ಸಮಾಧಿ ಬಳಿ ಓಬೇನಹಳ್ಳಿ ದಿ. ಕಲ್ಲಿಂಗಪ್ಪ, ಸಿದ್ಧನೂರು ದಿ. ನಾಗರಾಜಚಾರ್ ಅವರ 32 ನೇ ವರ್ಷದ ರೈತ ಹುತಾತ್ಮರ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ತಿಳಿಸಿದ್ದಾರೆ.

ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಅತಿಥಿಗಳಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವನಾಯ್ಕ, ಶಾಸಕ ಕೆ.ಎಸ್. ಬಸವಂತಪ್ಪ, ಸಮಿತಿ ಗೌರವಾಧ್ಯಕ್ಷ ಆನಗೋಡು ನಂಜುಂಡಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿ.ಪಂ. ಸಿಇಓ ಸುರೇಶ್ ಬಿ. ಇಟ್ನಾಳ್, ಉಪವಿಭಾಗಾಧಿಕಾರಿ ಸಂತೋಷ್ ಕುಮಾರ್, ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಎನ್. ತೀರ್ಥೇಶ್, ತಹಶೀಲ್ದಾರ್ ಡಾ. ಎಂ.ವಿ. ಅಶ್ವತ್ಥ್, ಕಾರ್ಯಪಾಲಕ ಇಂಜಿನಿಯರ್ ಟಾಟಾ ಶಿವನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಎನ್. ಶಿವಮೂರ್ತಿ ಸೇರಿದಂತೆ ಇತರೆ ಗಣ್ಯರು ಆಗಮಿಸಲಿದ್ದಾರೆ.


**ಹೃತ್ಪೂರ್ವಕ ಅಭಿನಂದನೆಗಳು**



'ಅಖಿಲ ಭಾರತ ವೀರಶೈವ ಮಹಾಸಭಾ'ದ
ರಾಷ್ಟ್ರೀಯ ಅಧ್ಯಕ್ಷರಾಗಿ ಸತತ ಮೂರನೇ ಬಾರಿಗೆ
ಅವಿರೋಧವಾಗಿ ಆಯ್ಕೆಯಾಗಿರುವ ಹಿರಿಯ ಶಾಸಕರಾದ
**ಡಾ|| ಶಾಮನೂರು ಶಿವಶಂಕರಪ್ಪಾಜಿ**
ಅವರಿಗೆ ಪಂಚಾಚಾರ್ಯ ಸೇವಾ ಟ್ರಸ್ಟ್ ಹಾಗೂ
ಅಕ್ಕಿ ವರ್ತಕರಿಂದ ಸನ್ಮಾನ ಮಾಡಲಾಯಿತು.

**ಶಿವಗಂಗಾ ಶ್ರೀನಿವಾಸ್**
ಉದ್ಯಮಿಗಳು

**ಅನ್ವರ್ ಬಾಷಾ ತುರ್ಚಘಟ್ಟ** ಉದ್ಯಮಿಗಳು | **ಸುರೇಶ್ ಪೈ** ಉದ್ಯಮಿಗಳು | **ದಾದಾಪೀರ್** ಮಾಲೀಕರು ತಾಜ್ ಹೋಟೆಲ್ | **ಆರೀಫ್ ಹುಸೇನ್ ಮಾಳಗಿ** ಯುವ ಉದ್ಯಮಿ

## ಒಂಟಿ ಪೋಷಕರ ಮಕ್ಕಳಿಗೆ ಹಣಕಾಸು ನೆರವು ಎಂಬುದು ಸುಳ್ಳು ಸುದ್ದಿ : ಡಿಸಿ



ದಾವಣಗೆರೆ, ಸೆ. 12 - ಒಂಟಿ ಪೋಷಕರಿರುವ ಮಕ್ಕಳಿಗೆ ಸರ್ಕಾರದಿಂದ ಹಣಕಾಸಿನ ನೆರವು ಸಿಗುತ್ತದೆ ಎಂಬ ಸುಳ್ಳು ಮಾಹಿತಿಯನ್ನು ಇತ್ತೀಚೆಗೆ ಜಿಲ್ಲೆಯಲ್ಲಿ ವೈರಲ್ ಮಾಡಲಾಗಿದೆ. ಆ ರೀತಿಯ ಯಾವುದೇ ಯೋಜನೆಯನ್ನು ಸರ್ಕಾರ ರೂಪಿಸಿಲ್ಲ ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ನೆರವಾಗಲು ಪ್ರಾಯೋಜಕತ್ವ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯ ಅನ್ವಯ ತಿಂಗಳಿಗೆ 4 ಸಾವಿರ ರೂ.ಗಳಂತೆ ಒಂದು ವರ್ಷದ ಅವಧಿಗೆ ಮಾತ್ರ ನೆರವು ನೀಡಲಾಗುತ್ತದೆ ಎಂದವರು ಹೇಳಿದರು.

ಈ ಯೋಜನೆಯ ಅನ್ವಯ 2021-22ರಲ್ಲಿ 401 ಮಕ್ಕಳು ಹಾಗೂ 2022-23ರಲ್ಲಿ 210 ಮಕ್ಕಳಿಗೆ ನೆರವು ನೀಡಲಾಗಿದೆ. 2023-24ರಲ್ಲಿ 96 ಮಕ್ಕಳನ್ನು ಗುರುತಿಸಲಾಗಿದೆ ಎಂದು ತಿಳಿಸಿದರು.

ಈ ಕುರಿತು ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ನಗರದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ ಸಂಪರ್ಕಿಸಬಹುದು, ಇಲ್ಲವೇ ದೂರವಾಣಿ : 08192 - 222701 ಗೆ ಕರೆ ಮಾಡಬಹುದು ಎಂದು ಜಿಲ್ಲಾಧಿಕಾರಿ ಹೇಳಿದರು.

## ಅಪೂರ್ಣ ಪ್ರಶ್ನೆ ಪತ್ರಿಕೆ ; ತಪ್ಪಿತಸ್ಥರ ವಿರುದ್ಧ ಕ್ರಮ : ಕುಲಸಚಿವರ ಸ್ಪಷ್ಟನೆ

ದಾವಣಗೆರೆ,ಸೆ.12- ಕಳೆದ 11ರಂದು ಎಂ.ಕಾಂ. ವಿದ್ಯಾರ್ಥಿಗಳಿಗೆ ನಡೆದ ಪರೀಕ್ಷೆಯಲ್ಲಿ 'ಬಿಸಿನೆಸ್ ಅಪ್ಲಿಕೇಷನ್ ಅಂಡ್ ಆಪರೇಶನ್ ರಿಸರ್ಚ್' ಪ್ರಶ್ನೆಪತ್ರಿಕೆಯಲ್ಲಿ ತಾಂತ್ರಿಕ ನ್ಯೂನ್ಯತೆಗೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಸಿ.ಕೆ.ರಮೇಶ್ ಸ್ಪಷ್ಟನೆ ನೀಡಿದ್ದಾರೆ.

ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆಯನ್ನು ನಿರ್ಲಕ್ಷ್ಯಿಸಲಾಗುವುದಿಲ್ಲ. ವಿಚಾರಣೆ ನಡೆಸಿ, ವರದಿ ಪರಿಶೀಲಿಸಿದ ನಂತರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ಈ ಕುರಿತು ವಿದ್ಯಾರ್ಥಿಗಳು ಮತ್ತು ಪೋಷಕರು ಯಾವುದೇ ರೀತಿ ಆತಂಕಪಡಬಾರದು ಎಂದು ಅವರು ತಿಳಿಸಿದ್ದಾರೆ.

## ಹಿರಿಯ ಪತ್ರಕರ್ತ ತಾರಾನಾಥ್‌ಗೆ ರಾಷ್ಟ್ರೀಯ ವಿಶ್ವಕರ್ಮ ರತ್ನ ಪ್ರಶಸ್ತಿ



ದಾವಣಗೆರೆ, ಸೆ. 12 - ಮಾಧ್ಯಮ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದಕ್ಕಾಗಿ ನಗರದ ಹಿರಿಯ ಪತ್ರಕರ್ತ ಎ.ಎಲ್. ತಾರಾನಾಥ್ ಅವರು ರಾಷ್ಟ್ರೀಯ ವಿಶ್ವಕರ್ಮ ರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಇದೇ ದಿನಾಂಕ 28 ರಂದು ನವದೆಹಲಿಯ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಯೋಜನೆ ಮಾಡಿರುವ ರಾಷ್ಟ್ರ ಮಟ್ಟದ ವಿಶ್ವಕರ್ಮ ಸಮ್ಮೇಳನದಲ್ಲಿ ಪ್ರಶಸ್ತಿ ಪುರಸ್ಕಾರ ಮಾಡಲಾಗುವುದು.

ಸಮಾವೇಶದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ದೇಶದ 25 ಜನರಿಗೆ ರಾಷ್ಟ್ರೀಯ ವಿಶ್ವಕರ್ಮ ರತ್ನ ಪ್ರಶಸ್ತಿ ಪುರಸ್ಕಾರ ಮಾಡಿ ಗೌರವಿಸಲಾಗುವುದು. ಎ.ಎಲ್. ತಾರಾನಾಥ್ ಸೇರಿದಂತೆ ರಾಜ್ಯದಿಂದ 8 ಜನ ಸಾಧಕರು ಆಯ್ಕೆ ಆಗಿದ್ದಾರೆ ಎಂದು ವಿಶ್ವಕರ್ಮ ಸಮ್ಮೆಳನದ ರಾಷ್ಟ್ರೀಯ ಅಧ್ಯಕ್ಷ ಮಾರುತಿ ಬಡಿಗೇರ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಸಿಜೆಐ ನಿವಾಸದಲ್ಲಿ ಪಿಎಂ ಪೂಜೆ ಆಕ್ಷೇಪ : ವಿರೋಧ ಪಕ್ಷಗಳಿಗೆ ಬಿಜೆಪಿ ತರಾಟೆ

ನವದೆಹಲಿ, ಸೆ. 12 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನಿವಾಸದಲ್ಲಿ ಗಣಪತಿ ಪೂಜೆ ಸಮಾರಂಭದಲ್ಲಿ ಪಾಲ್ಗೊಂಡಿರುವುದಕ್ಕೆ ಹಲವರು ಆಕ್ಷೇಪಿಸಿದ್ದಾರೆ.

ಈ ಕುರಿತ ಟೀಕೆಗಳನ್ನು ತಳ್ಳಿ ಹಾಕಿರುವ ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳು, ಸುಪ್ರೀಂ ಕೋರ್ಟ್ ಪ್ರತಿಷ್ಠೆ ಕುರಿತು ಆಧಾರ ರಹಿತ ಹೇಳಿಕೆ ನೀಡುವುದು ಅಪಾಯಕಾರಿ ನಡಾವಳಿಯಾಗುತ್ತದೆ ಎಂದು ಹೇಳಿವೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ, ಈ ಹಿಂದೆ ಪ್ರಧಾನ ಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ಅವರು ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಆಗಿನ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಾಲ್ಗೊಂಡಿರಲಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.

ಪ್ರಧಾನ ಮಂತ್ರಿಯು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಭೇಟಿ ಮಾಡುವುದರ ಬಗ್ಗೆ ಅವರಿಗೆ ಯಾವುದೇ ಆಕ್ಷೇಪ ಇಲ್ಲ. ಆದರೆ, ಗಣಪತಿ ಪೂಜೆಯ ಬಗ್ಗೆ ಆಕ್ಷೇಪಿಸಲಾಗುತ್ತಿದೆ. ಪ್ರತಿಪಕ್ಷಗಳ ನಾಯಕರು ರಾಜಕೀಯ ಮಾಡುತ್ತಿದ್ದಾರೆ ಎಂದು ಪಾತ್ರ ಹೇಳಿದ್ದಾರೆ.

ಪ್ರಧಾನ ಮಂತ್ರಿಯು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಭೇಟಿ ಮಾಡಿದ್ದಕ್ಕೆ ಆಕ್ಷೇಪಿಸಲಾಗುತ್ತಿದೆ.

ಆದರೆ, ಪಾಕ್ ಆಕ್ರಮಿತ ಕಾಶ್ಮೀರದ ಪರವಾಗಿರುವ ಅಮೆರಿಕದ ಶಾಸಕಿ ಇಲ್ಹಾನ್ ಓಮರ್ ಅವರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭೇಟಿ ಮಾಡಿದ್ದಕ್ಕೆ ಅವರಿಗೆ ಯಾವುದೇ ಆಕ್ಷೇಪವಿಲ್ಲ ಎಂದು ಪಾತ್ರ ಕುಟುಕಿದ್ದಾರೆ.




ಬುಧವಾರ ಪ್ರಧಾನಿ ಮೋದಿ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಮನೆಯಲ್ಲಿ ಆಯೋಜಿಸಲಾಗಿದ್ದ ಗಣಪತಿ ಪೂಜೆಯಲ್ಲಿ ಪಾಲ್ಗೊಂಡಿದ್ದರು.

ಸಂವಿಧಾನ ರಕ್ಷಕರಾಗಿರುವವರು ರಾಜಕೀಯ ನಾಯಕರನ್ನು ಭೇಟಿ ಮಾಡಿದಾಗ ಜನರಲ್ಲಿ ಅನುಮಾನಗಳಾಗುತ್ತವೆ ಎಂದು ಶಿವಸೇನೆ (ಯುಬಿಟಿ) ನಾಯಕ ಸಂಜಯ್ ರಾವತ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ವಕೀಲರ ಒಕ್ಕೂಟ ಈ ಭೇಟಿಯನ್ನು ಖಂಡಿಸಬೇಕು ಎಂದು ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಒತ್ತಾಯಿಸಿದ್ದರು.

ಈ ಟೀಕೆಗಳನ್ನು ತಳ್ಳಿ ಹಾಕಿರುವ ಪಾತ್ರ, ಪ್ರಜಾಪ್ರಭುತ್ವದ ಬೇರೆ ಬೇರೆ ಸ್ತಂಭಗಳು ಭೇಟಿಯಾಗಬಾರದೇ? ಸ್ನೇಹಿತರಾಗಿರಬಾರದೇ? ಅವರು ಶತ್ರುಗಳಾಗಿರಬೇಕೇ? ಅವರು ಪರಸ್ಪರ ಮಾತನಾಡಬಾರದೇ? ಕೈ ಕುಲುಕಬಾರದೇ? ಸೌಹಾರ್ದಯುತವಾಗಿ ವರ್ತಿಸಬಾರದೇ? ಎಂದು ಪ್ರಶ್ನಿಸಿದ್ದಾರೆ.







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas